ಶ್ರೀ ಜೆ. ಹೆಚ್. ಪಟೇಲ್— ಮೈನಾರಿಟೀಸ್ ಕಮೀಷನ್ ಫೈನಲ್ ರಿಪೋರ್ಟ್ ಸದ್ಯದ ಲ್ಲಿಯೇ ಬರಲಿದೆ. ಮೈನಾರಿಟಿ ಕಾರ್ಪೊರೇಷನ್‌ಗೆ ಒಂದು ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದೆ. ಕಾರ್ಪೊರೇಷನ್‌ಗೆ ಛೇರ್ಮನ್‌ರವರ ನೇಮಕವನ್ನು ಶೀಘ್ರದಲ್ಲಿಯೇ ಮಾಡಲಾಗುವುದು. ಅಧ್ಯಕ್ಷರ ನೇಮಕವಾದ ಮೇಲೆ ಅದರ ಕೆಲಸ ಪ್ರಾರಂಭವಾಗುತ್ತದೆ. ಹಳ್ಳಿಗಾಡಿನಲ್ಲಿ ಇರತಕ್ಕ ಬಡವರಿಗೆ ಪಟ್ಟಣ ಪ್ರದೇಶಗಳಲ್ಲಿರತಕ್ಕ ಬಡವರಿಗೆ ವ್ಯತ್ಯಾಸ ಏನೂ ಇಲ್ಲ. ಗ್ರಾಮೀಣಾಭಿವೃದ್ಧಿ ಕಾರ್ಯ ಕ್ರಮಗಳನ್ನು ರಾಷ್ಟ್ರೀಯ ಯೋಜನೆಗಳನ್ನು ಜೊತೆಗೆ ತೆಗೆದುಕೊಂಡು ಹೋಗಬೇಕಾದ ಕಾರಣದಿಂದ ಪಟ್ಟಣ ಪ್ರದೇಶಗಳಲ್ಲಿರತಕ್ಕ ಬಡವರನ್ನು ಬಿಟ್ಟು ಕಾರ್ಯಕ್ರಮಗಳನ್ನು ಹಾಕಬೇಕಾಗಿದೆ. ಸ್ಟೇಡಿಯಂ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಕೆ. ಆರ್. ಮಿಲ್‌ಗೆ ಸಂಬಂಧಪಟ್ಟಂತೆ ಸರ್ಕಾರದ ಉದ್ದೇಶ ಸ್ಪಷ್ಟವಿದೆ ಕಾರ್ಮಿಕರ ಹಿತದೃಷ್ಟಿಯಿಂದ ಕಾರ್ಖಾನೆಯನ್ನು ಪ್ರಾರಂಭಿಸಬೇಕೆಂಬ ಇಚ್ಛೆ ಸರ್ಕಾರಕ್ಕಿದ್ದರೂ ಕೂಡ ಮಾಲೀಕರು ಆ ಕಡೆ ಈ ಕಡೆ ಹೋಗಂತ್ತಿದ್ದಾರೆ. ಕೇಂದ್ರದ ಹಣಕಾಸಿನ ಸಂಸ್ಥೆಗಳು ಕೂಡ ಹಣ ಕೊಡಬೇಕೆಂದು ಹೇಳಿದ್ದೇವೆ.

ಅಧ್ಯಕ್ಷರು— ಪ್ರಸ್ತಾವ ಏನೆಂದರೆ, ಜನವರಿ ೨೦, ೧೯೮೬ರಂದು ಮಾನ್ಯ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ಈ ಅಧಿವೇಶನದಲ್ಲಿ ಸೇರಿರುವ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇವೆ.

ಪ್ರಸ್ತಾಪ ಅಂಗೀಕೃತವಾಗಿದೆ

ಖಾಸಗೀ ಸದಸ್ಯರ ನಿರ್ಣಯಗಳು

(೧) ಪರಿಶಿಷ್ಟ ವರ್ಗ ಮತ್ತು ಜನಾಂಗಗಳಿಗೆ ಮೀಸಲಾಗಿಟ್ಟ ಸವಲತ್ತುಗಳನ್ನು ಆ ವರ್ಗದ ಹಿರಿಯ ಅಧಿಕಾರಿಗಳ ಮಂತ್ರಿಗಳ, ಮತ್ತು ಶಾಸಕರ ಮಕ್ಕಳಿಗೆ ವಿಸ್ತರಣೆ ಮಾಡದಿರುವುದು

ಶ್ರೀ ಬಿ. ಎಂ. ತಿಪ್ಪೇಸ್ವಾಮಿ (ಭರಮಸಾಗರ) ಸನ್ಮಾನ್ಯ ಅಧ್ಯಕ್ಷರೇ. ನಾನು ಈ ದಿವಸ ಈ ಖಾಸಗೀ ನಿರ್ಣಯವನ್ನು ತರುವುದಕ್ಕೆ ಮುಂಚೆ ಕೆಲವೊಂದು ಅಂಶಗಳನ್ನು ತಮ್ಮ ಮೂಲಕ ಸರ್ಕಾರ ದವರ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಡಾಕ್ಟರ್ ತಿಪ್ಪೇಸ್ವಾಮಿಯವರು, ಮೀಸಲಾತಿಗೆ ಸಂಬಂಧಪಟ್ಟಂತೆ. ಅದಕ್ಕೆ ವಿರುದ್ಧವಾಗಿ ಮತ್ತು ಹರಿಜನರಿಗೆ ವಿರುದ್ಧವಾಗಿ ಇಂಥ ನಿರ್ಣಯ ತಂದಿದ್ದಾರಲ್ಲ ಎಂದು ತಿಳಿದುಕೊಂಡರೆ ತಪ್ಪಾದೀತು. ನಾನು ಮೀಸಲಾತಿ ವಿರೋಧಿಯಲ್ಲ. ಇವೊತ್ತು ಎಲ್ಲಾ ವರ್ಗಗಳಲ್ಲಿಯೂ, ಎಲ್ಲಾ ಜನಾಂಗಗಳಲ್ಲಿಯೂ ಶೋಷಿತ ವರ್ಗ ಹಾಗೂ ಶೋಷಣೆ ಮಾಡತಕ್ಕ ವರ್ಗ ಎಂದು ಎರಡು ಭಾಗ ಇದೆ. ಪ್ರತಿಯೊಂದು ಜಾತಿಯಲ್ಲಿಯೂ ವಿದ್ಯಾವಂತರು ಒಂದು ಭಾಗ, ದಡ್ಡರು ಒಂದು ಭಾಗ ಇರುತ್ತಾರೆ. ನಾನು ತಂದಿರತಕ್ಕಂಥ ನಿರ್ಣಯ ಬರೀ ಹರಿಜನ ಗಿರಿಜನಕ್ಕೆ ಸಂಬಂಧಪಟ್ಟ ಮೀಸಲಾತಿಗೆ ಸೇರಿದ್ದಲ್ಲ. ಇದು ಎಲ್ಲಾ ಜನಾಂಗಗಳಲ್ಲಿಯೂ ಇರುವಂಥ ಶೋಷಿತ ವರ್ಗಕ್ಕೆ ಅನ್ವಯಿಸುತ್ತದೆ ಎಂದು ಭಾವಿಸುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ— ಸ್ವಾಮಿ, ಅವರ ದೃಷ್ಟಿಯಿಂದ ಒಳ್ಳೆಯದಿರಬಹುದು. ಹರಿಜನ ಗಿರಿಜನ ಸಮಾಜದಲ್ಲೂ ಶ್ರೀಮಂತರು ಬಡವರು ಇದ್ದಾರೆ. ಇದು ಒಪ್ಪತಕ್ಕಂಥ ತತ್ವ. ಆದರೆ. ಈ ದೇಶದಲ್ಲಿ ಕ್ಯಾಸ್ಟ್ ಮತ್ತು ಕ್ಲಾಸ್ ಒಂದು ಕಡೆ ಹೋಗಂತ್ತದೆ.

ಶ್ರೀ ಬಿ. ಎಂ. ತಿಪ್ಪೇಸ್ವಾಮಿ— ಎಲ್ಲಾ ವರ್ಗದಲ್ಲೂ ಶ್ರೀಮಂತ ವರ್ಗ. ಬಡ ವರ್ಗ ಎಂದು ಇದೆ, ಅದರಲ್ಲಿಯೂ ಹರಿಜನ ಗಿರಿಜನರಿಗೆ ಸಂಬಂಧಪಟ್ಟಂತೆ ಏತಕ್ಕೆ ನಿರ್ಣಯ ತಂದಿದ್ದೇನೆಂದರೆ. ಉದ್ದೇಶ ಇಷ್ಟೆ.

ಮೊದಲು ತಾವುಗಳೆಲ್ಲರೂ ಈ ನಿರ್ಣಯವನ್ನು ಓದಿದ್ದೀರಿ, ಎಂದು ಭಾವಿಸುತ್ತೇನೆ, ನಾನೂ ಓದಿದ್ದೇನೆ. ಸಭೆಯ ಅನುಕೂಲಕ್ಕಾಗಿ ಅದನ್ನು ಇನ್ನೊಮ್ಮೆ ಓದುತ್ತೇನೆ.

"ಈ ಸಭೆಯು ಹರಿಜನ ಗಿರಿಜನರಲ್ಲಿರುವ ಉನ್ನತ ಅಧಿಕಾರಿಗಳು, ಮಂತ್ರಿಗಳು, ಸಂಸತ್ ಸದಸ್ಯರು, ಶಾಸಕರು ಹಾಗೂ ಆರ್ಥಿಕವಾಗಿ ವಾರ್ಷಿಕ ವರಮಾನ ೧೦-೧೫

ಸಾವಿರ ಇರತಕ್ಕಂತ ಎಲ್ಲಾ ಮುನಿಂಡರುಗಳಿಗೆ ಇನ್ನು ಮುಂದೆ ಹರಿಜನ ಮತ್ತು ಗಿರಿಜನರಿಗೆ ಇರುವ ಎಲ್ಲಾ ಸರ್ಕಾರಿ ಸೌಲಭ್ಯಗಳನ್ನು ಅನ್ವಯಿಸಬಾರದೆಂದು ಕೇಂದ್ರ ಸರ್ಕಾರದವರಿಗೆ ಶಿಫಾರಸ್ಸನ್ನು ಮಾಡಲು ಒಮ್ಮತದಿಂದ ತೀರ್ಮಾನಿಸುತ್ತದೆ.''

ಇದರಲ್ಲಿ ನಾನು ಕೆಲವಾರು ತಿದ್ದುಪಡಿಗಳನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಒಂದನೆಯದಾಗಿ, ಎಲ್ಲಾ ಸದಸ್ಯರ ಮತ್ತು ಹಿರಿಯರ ಅಭಿಪ್ರಾಯದ ಪ್ರಕಾರ ಈಗಿನ ಕಾಲದಲ್ಲಿ ೧೦-೧೫ ಸಾವಿರ ವರಮಾನ ಸಾಮಾನ್ಯವಾಗಿ ಸಾಧಾರಣವಾದ ಒಬ್ಬ ಕ್ಲಾಸ್-೪ ವರ್ಗದ ನೌಕರನಿಗೂ ಕೂಡ ಅಂದರೆ ಅವನು ಪ್ರಾಥಮಿಕ ಶಾಲಾ ಶಿಕ್ಷಕನಾಗಿರಬಹುದು, ಜವಾನ ಇರಬಹುದು, ಅಥವಾ ಸಣ್ಣ ಕೂಲಿಕಾರನಿರಬಹುದು, ಅವರ ಸಂಬಳವನ್ನು ಲೆಕ್ಕ ಹಾಕುವುದಾದರೆ ಅದು ೧೫ ಸಾವಿರಕ್ಕೆ ಬಂದು ಬಿಡುತ್ತದೆ. ಅದು ನನಗೂ ಕೂಡ ಪಾಸಪರಿಕೆಯಾಗಿದ್ದು ಈ ತಿದ್ದುಪಡಿಯನ್ನು ಮಾಡಲಿಚ್ಚಿಸುತ್ತೇನೆ.—

''ಈ ಸಭೆಯು ಹರಿಜನ-ಗಿರಿಜನರಲ್ಲಿರುವ ಉನ್ನತ ಅಧಿಕಾರಿಗಳು ಮಂತ್ರಿಗಳು, ಸಂಸತ್ ಸದಸ್ಯರು, ಶಾಸಕರು ಹಾಗೂ ಆರ್ಥಿಕವಾಗಿ ವಾರ್ಷಿಕ ವರಮಾನ ೨೫-೩೦ ಸಾವಿರ ಇದ್ದರೂ ಪರವಾಯಿಲ್ಲ'' ಎನ್ನುವ ತಿದ್ದುಪಡಿಯನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ

ಇನ್ನೊಂದು ಅಂಶವೇನೆಂದರೆ ಅಕಸ್ಮಾತ್ ಶಿಕ್ಷಕರಾಗಿರತಕ್ಕಂತಹವರು ಚುನಾವಣೆಯಲ್ಲಿ ನಿಂತು ಪ್ರಥಮ ಬಾರಿಗೆ ಗೆದ್ದು ಬಂದರೆ ಇಂತಹ ಕಡ್ಡಾಯವನ್ನು ಅವರಿಗೆ ಏಕ್‌ದಮ್ ಹಾಕಿದರೆ, ತೊಂದರೆಯಾಗುತ್ತದೆ ಅವರ ಆರ್ಥಿಕ ದೃಷ್ಟಿಯಿಂದ ಇದರಲ್ಲಿ ಅವರನ್ನು ಸೇರಿಸಬಾರದು ಎಂಬ ಅಭಿಪ್ರಾಯ ಬಂದದ್ದರಿಂದ. ನನ್ನನ್ನು ಬಿಟ್ಟು, ಮೊದಲನೆಯಂ ಸಾರಿ ಶಾಸಕರಾಗಿರತಕ್ಕಂತಹವರಿಗೆ, ಮೊದಲನೆಯಂ ಸಾರಿ ಸಂಸತ್ ಸದಸ್ಯರಾಗಿರತಕ್ಕಂತಹವರಿಗೆ ಇದರಿಂದ ವಿನಾಯಿತಿಯನ್ನು ಕೊಡಬಹುದೆಂಬ ಎರಡನೇ ತಿದ್ದುಪಡಿಯನ್ನು ನಾನು ತರುವುದಕ್ಕೆ ಇಷ್ಟಪಡುತ್ತೇನೆ.

ಈ ಒಂದು ನಿರ್ಣಯದ ಬಗ್ಗೆ ಮಾತನಾಡಬೇಕಾದರೆ ೧೯೩೩ಕ್ಕಿಂತ ಹಿಂದೆ ಕೆಳವರ್ಗದಲ್ಲಿರತಕ್ಕಂತಹವರನ್ನು ಪಂಚಮರು ಎಂಬುದಾಗಿ ಕರೆಯುತ್ತಿದ್ದರು. ಪಂಚವರು ಎಂದರೆ, ಒಂದು, ಎರಡು, ಮೂರು ಹಾಗೂ ನಾಲ್ಕು ಇದನ್ನು ಬಿಟ್ಟು ೫ನೆಯವರು ಎಂದರ್ಥ. ೧೯೧೩ರಲ್ಲಿ ಮೈಸೂರಿನಲ್ಲಿ ಪಂಚಮ ಹಾಸ್ಟಲ್ ಹಾಗೂ ಪಂಚಮ ಬೋರ್ಡಿಂಗ್ ಹೋಂ ಎಂಬುದಾಗಿ ಪ್ರಾರಂಭವಾಗಿತ್ತು. ಇದು ಆದ ಮೇಲೆ ನರಸಿಂಹರಾಜ ಒಡೆಯರ್‌ರವರು ಬೆಂಗಳೂರಿನಲ್ಲಿ ಒಂದು ಹಾಸ್ಟೆಲ್ಲನ್ನು ಪ್ರಾರಂಭ ಮಾಡಿದರು. ನರಸಿಂಹರಾಜ ಒಡೆಯರ್ ಹಾಸ್ಟಲ್ ಎಂಬುದಾಗಿ ಕರೆಯುತ್ತಿದ್ದರು. ೧೯೩೩ರ ಇದೆಗೆ ಅವರ ಹೆಸರನ್ನೇ ಇಟ್ಟುಕೊಂಡು ಆ ಹಾಸ್ಟಲನ್ನು ನಡೆಸಿಕೊಂಡು ಬಂದರು. ಇದಾದ ಮೇಲೆ ಸಿ ಆರ್. ರೆಡ್ಡಿಯವರು ಶ್ರೀ ನರಸಿಂಹ ರಾಜ ಒಡೆಯರ್‌ರವರು ಹಾಗೂ ಶ್ರೀ ಮಿರ್ಜಾ ಇಸ್ಮಾಯಿಲ್ ಸಾಹೇಬರವರು ೧೯೩೩ರ ನಂತರ ಪಂಚಮ ಬೋರ್ಡಿಂಗ್ ಹೋಂ, ಪಂಚಮ ಹಾಸ್ಟಲ್ ಎಂಬುದಾಗಿ ಕರೆಯುವುದರಿಂದ ಅವರನ್ನು ಇನ್ನೂ ಕೀಳುಮಟ್ಟದಲ್ಲೇ ಗುರುತಿಸುವಂತಾಗುತ್ತದೆಂದು ತಿಳಿದು ಪಂಚಮಾ ಎಂಬ ಹೆಸರನ್ನು ತೆಗೆದು ಹಾಕಿ ಪಂಚಮಾ ಸ್ಕೂಲು, ಹಾಗೂ ಪಂಚಮಾ ಬೋರ್ಡಿಂಗ್ ಹೋಂಗಳನ್ನು ಜನರಲ್ ಹಾಸ್ಟಲ್ ಜನರಲ್ ಸ್ಕೂಲು ಎಂಬುದಾಗಿ ಬದಲಾವಣೆ ಮಾಡಿದರು. ೧೯೩೩-೩೪ರಲ್ಲಿ ಒಂದು ನಿರ್ಣಯವನ್ನು ಮಾಡಿ ಪಂಚಮಾ ಸ್ಕೂಲುಗಳನ್ನು ಅಬಾಲಿಷ್ ಮಾಡಿದರು. ಆ ರೀತಿ ಇದ್ದಂತಹ ಶಾಲೆಗಳನ್ನು ಅಬಾಲಿಷ್ ಮಾಡಿದಾಗ ಅನೇಕ ಹರಿಜನ-ಗಿರಿಜನ ಗುಡಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಂತಹವರು ಶಾಲೆಗಳನ್ನು ಬಿಟ್ಟು ಊರಿನಲ್ಲಿ ದನ ಕಾಯುವುದಕ್ಕೆ ಸೇರಿಕೊಂಡರು. ಏಕೆಂದರೆ ಇವರು ಬೇರೆ ಊರಿಗೆ ಹೋಗಿ ವಿದ್ಯಾಭ್ಯಾಸವನ್ನು ಮಾಡಬೇಕಾಗಿತ್ತು. ಇದು ಅವರಿಗೆ ಬಹಳ ಕಷ್ಟದ ಕೆಲಸವಾಗಿತ್ತು. ಸಮ್ಮ ಊರಿನಲ್ಲೂ ಪಂಚಮಾ ಸ್ಕೂಲೊಂದು ಇತ್ತು. ಆಗ ೫೦ ಜನರು ವಿದ್ಯಾಭ್ಯಾಸವನ್ನು ಮಾಡುತ್ತಿದ್ದೆವು. ಅವರೆಲ್ಲರೂ ವಿದ್ಯಾಭ್ಯಾಸವನ್ನು ಬಿಟ್ಟರು. ಆದರೆ ಮೂರು ಜನ ಮಾತ್ರ ಪಕ್ಕದ ಊರಿನಲ್ಲಿದ್ದಂತಹ ಶಾಲೆಗೆ ಹೋಗಿ ವಿದ್ಯಾಭ್ಯಾಸವನ್ನು ಮಾಡಿದರು. ಇದಂ ಆದ ಮೇಲೆ ರಾಜ್ಯಾಂಗ ಜಾರಿಗೆ ಬಂತು. ಆಗ ಪಂಚಮ ಎಂಬುವುದನ್ನು ಬಿಟ್ಟು ಡಿಪ್ರೆಸ್ಡ್ ಕ್ಲಾಸ್ ಎಂಬುದಾಗಿ ಕರೆದರು. ಮಹಾತ್ಮಾ ಗಾಂಧೀಜಿಯವರು ಹಾಗೂ ಡಾ. ಅಂಬೇಡ್ಕರ್‌ರವರು ರೌಂಡ್ ಟೇಬಲ್ ಕಾನ್ಫರೆನ್ಸ್‌ನಲ್ಲಿ ವಿರಸ ಬಂದಾಗ ಆದಕ್ಕೊಂದು ಅಗ್ರಿಮೆಂಟ್ ಆಗಿ ಡಿಪ್ರೆಸ್ಡ್ ಕ್ಲಾಸ್ ಎಂಬುದಾಗಿ ಕರೆಯುವ ಬಗ್ಗೆ ಒಂದು ಕಮಿಷನ್ ನೇಮಕವಾಯಿತು. ಅದರ ನಂತರ ರಾಜ್ಯಾಂಗ ಜಾರಿಗೆ ಬಂದ ಮೇಲೆ ಎಸ್.ಸಿ ಎಂದು ಮಾಡಿದರು. ಷೆಡ್ಯೂಲ್ಡ್ ಕ್ಯಾಸ್ಟ್ ಎಂದರೆ ಯಾರು ಸಮಾಜ

ದಲ್ಲಿ ಅತ್ಯಂತ ಕೀಳು ಸ್ಥಿತಿಯಲ್ಲಿದ್ದಾರೆ. ಯಾರಿಗೆ ಅಸ್ಪೃಶ್ಯರು ಎಂದು ಕರೆಯುತ್ತಾರೆ, ಯಾರಿಗೆ ಸ್ಪಿಗ್ಮಾ ಕ್ಯಾರಕ್ಟರ್ ಸ್ಟಿಕ್ ಇದೆಯೋ ಅಂತಹವರನ್ನೆಲ್ಲಾ ಸೇರಿಸಿ ಎಸ್.ಸಿ. ಎಂದು ಮಾಡಿದರು. ಷೆಡ್ಯೂಲ್ಡ್ ಕ್ಯಾಸ್ಟ್ ಜನಾಂಗದ ಬೆಳವಣಿಗೆಗೆ ಡಾ. ಅಂಬೇಡ್ಕರ್‌ರವರು ರಾಜ್ಯಾಂಗದಲ್ಲಿ ಏನೇನು ಸೂಚನೆ ಮಾಡಿದರು ಎಂದರೆ, ಪೊಲಿಟಿಕಲ್, ಎಜುಕೇಷನಲ್, ಎಕನಾಮಿಕಲ್ ಹಾಗೂ ಸೋಷಿಯಲ್ ಎಂಬುದಾಗಿ ಈ ಪಾಯಿಂಟ್‌ಗಳನ್ನು ಕನ್ಸಿಡರ್ ಮಾಡಿ ರಾಜ್ಯಾಂಗದಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ, ಈ ಒಂದು ಜನಾಂಗಕ್ಕೆ ಕೆಲವು ಸವಲತ್ತುಗಳನ್ನು ಜಾರಿಗೆ ತಂದರು. ಇದನ್ನು ಎಷ್ಟು ವರ್ಷಗಳ ಕಾಲ ಮುಂದುವರಿಸಬೇಕು ಎಂಬುದರ ಬಗ್ಗೆ, ಒಂದು ಡ್ರಾಫ್ಟ್ ಕಮಿಟಿಯನ್ನು ಮಾಡಿದ್ದರು. ಅದರಲ್ಲಿ ಪಂಡ್ಯಾಸ್‌ನವರೊಬ್ಬರು ಸದಸ್ಯರಾಗಿದ್ದರು. ಅವರ ಹೆಸರು ನನಗೆ ಮರೆತು ಹೋಗಿದೆ. ಅವರೆಲ್ಲರೂ ಸೇರಿ ಪ್ರಾರಂಭದಲ್ಲಿ ೫೦ ವರ್ಷಗಳ ಕಾಲ ಈ ಒಂದು ಸೌಲಭ್ಯವನ್ನು ಅವರಿಗೆ ಕೊಡಬೇಕೆಂದು ತೀರ್ಮಾನ ಮಾಡಿದರು. ಅದಕ್ಕೆ ಡಾ. ಅಂಬೇಡ್ಕರ್‌ರವರೂ ಕೂಡ ಒಪ್ಪಿಕೊಂಡರು. ಅದರಂತೆ ೧೦ ವರ್ಷವಾದ ಮೇಲೆ ಅಂದು ಪ್ರಧಾನ ಮಂತ್ರಿಗಳಾಗಿದ್ದಂತಹ ಶ್ರೀಮಾನ್ ನೆಹರು ಅವರು, ಇದನ್ನು ಇನ್ನು ಮುಂದುವರಿಸುವುದು ಬೇಡ ಎಂಬುದಾಗಿ ಸಲಹೆ ಮಾಡಿದಾಗ, ಶ್ರೀಮಾನ್ ವಲ್ಲಭಾಯ್ ಪಟೇಲ್‌ರವರು, ಇಡೀ ಭಾರತದಲ್ಲಿ ೧೦೦ಕ್ಕೆ ೧೫ರಷ್ಟು ಜನರು ಅಸ್ಪೃಶ್ಯ ಜನಾಂಗಕ್ಕೆ ಸೇರಿದವರಾಗಿದ್ದಾರೆ, ಅವರನ್ನು ಮೇಲೆ ಹಾಕಿಕೊಂಡರೆ ನಾವು ಉಳಿಯುವುದಕ್ಕಾಗುವುದಿಲ್ಲವೆಂದು ಸಲಹೆ ಮಾಡಿದಾಗ, ೧೦–೧೦–೧೦ ವರ್ಷಗಳಂತೆ ಮುಂದುವರಿಸುತ್ತಿದ್ದಾರೆ. ಇದನ್ನು ಇನ್ನೂ ಮುಂದುವರಿಸುತ್ತಾ ಬಂದಿರುವಂತಹ ಉದ್ದೇಶ, ಸಮಾಜದಲ್ಲಿ ಅಸ್ಪೃಶ್ಯ ಜನಾಂಗಕ್ಕೆ ಸೇರಿದಂತಹ ವರ್ಗದವರು ಯಾರು ಇದ್ದಾರೆ. ಅವರನ್ನು ಮೇಲೆ ತರಬೇಕೆಂಬುದೇ. ಅದಕ್ಕಾಗಿ ರಾಜಕೀಯವಾಗಿ ಇವರಿಗೆ ರಕ್ಷಣೆಯನ್ನು ಕೊಟ್ಟರು. ರಾಜಕೀಯ ರಕ್ಷಣೆ ಏನೆಂದರೆ, ಪಂಚಾಯಿತಿ, [illegible] ಕು ಬೋರ್ಡ್ ಹಾಗೂ ಅಸೆಂಬ್ಲಿ ಕ್ಷೇತ್ರಗಳಲ್ಲಿ ಮೀಸಲು ಸ್ಥಾನವನ್ನು ಕೊಟ್ಟರು. ಆದರಿಂದ ಜನಾಂಗಕ್ಕೆ ಸೇರಿದ ಕೆಲವರು ಉನ್ನತ ಮಟ್ಟಕ್ಕೆ ಬಂದರು. ಒಂದು ಹಂತದಿಂದ ಮೇಲಕ್ಕೆ ಬಂದಿದ್ದಾರೆ. ಅವರಲ್ಲಿ ಕೆಲವರು ಮಂತ್ರಿಗಳಾಗಿರಬಹುದು, ಕೆಲವರು ಎಂ.ಪಿ.ಗಳಾಗಿರಬಹುದು, ಕೆಲವರು ಐಎಸ್‌ಕರಾಗಿರಬಹುದು. ಬೇರೆ ಬೇರೆ [illegible]ಕರಿಯಲ್ಲಿ ಇರಬಹುದು. ಆ ಪ್ರಶ್ನೆ ಬೇರೆ. ವಿದ್ಯಾವಂತರಾಗಿರತಕ್ಕಂತವರು ಕೆಲವು ನೌಕರಿಗೆ ಸೇರಿರಬಹುದು. ಆದರಲ್ಲಿ ಉನ್ನತ ಮಟ್ಟದಲ್ಲಿರುವಂತಹ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್. ಅಧಿಕಾರಿಗಳಾಗಿ ಕೆಲವರು ಇರಬಹುದು. ನಂತರ ತೀರ್ಜ ಅಧಿಕಾರಿಗಳಾಗಿಯೂ ಇರಬಹುದು. ತೀರ ಕನಿಷ್ಟ ಎಂದರೆ ಹೈಸ್ಕೂಲು ಟೀಚರ್ ಆಗಿ ಇರಬಹುದು, ಗುಮಾಸ್ತರಾಗಿ ಇರಬಹುದು, ಕೆಳಹಂತದಲ್ಲಿರುವ ಜವಾನನಾಗಿರಬಹುದು. ಇವೆರಡನ್ನೂ ಸೇರಿಸಿಕೊಂಡರೆ, ನಮ್ಮ ಜನಸಂಖ್ಯೆಯಲ್ಲಿ ೨ ಪರ್ಸೆಂಟ್ ಇರಬಹುದು ನಮ್ಮ ಜನಾಂಗದವರ ವಿದ್ಯಾವಂತರ ಸಂಖ್ಯೆಯನ್ನು ನೋಡಿದಾಗ ೧೯.೨ರಿ ಪರ್ಸೆಂಟ್ ಇದೆ ಅದರಲ್ಲಿ ಆಡಲ್ಟ್ ಎಜುಕೇಷನ್ ಕೂಡ ಸೇರಿದೆ. ಆಡಲ್ಟ್ ಎಜುಕೇಷನ್ ಕೂಡ ಸೇರಿಗೆ ಆಡಲ್ಟ್ ಎಜುಕೇಷನ್ ಹಾಗೂ ಅಕ್ಷರ ಸೇನೆ ಎಂಬುದಾಗಿ ಏನು ಯೋಜನೆಗಳಿವೆ, ಅವುಗಳು ಬೋಗಸ್ ಎಂಬುದಾಗಿ ನಾನು ಈ ಮೊದಲೇ ಹೇಳಿದ್ದೇನೆ. ಇವರನ್ನು ಬಿಟ್ಟರೆ, ನಮ್ಮ ಜನಾಂಗದಲ್ಲಿರುವಂತಹ ವಿದ್ಯಾವಂತರ ಸಂಖ್ಯೆ ೧೯.೨ಕ್ಕೆ ಪರ್ಸೆಂಟ್ ಇರಬಹುದು. ಅಂತಹವರಲ್ಲಿ ಎಸ್.ಎಸ್.ಎಲ್.ಸಿ. ಪಾಸು ಮಾಡಿಕೊಂಡು ಗುಮಾಸ್ತನ ಹುದ್ದೆಯಲ್ಲಿರುವಂತಹವರನ್ನೂ ಲೆಕ್ಕ ಹಾಕಿದರೆ ಅಧಿಕಾರ ವರ್ಗದಲ್ಲಿರುವವರ ಸಂಖ್ಯೆ ೨ ಪರ್ಸೆಂಟ್. ಇನ್ನೂ ೯೮ ಪರ್ಸೆಂಟ್ ಹಳ್ಳಿಯಲ್ಲೇ ಇದ್ದಾರೆ. ಅಲ್ಲಿರತಕ್ಕಂತ ಜನರ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ ೧೯೪೭ನೇ ಇಸವಿಯಲ್ಲಿ ಇವರು ಯಾವ ಸ್ಥಿತಿಯಲ್ಲಿದ್ದರೋ, ಇವತ್ತೂ ಅದೇ ಸ್ಥಿತಿಯಲ್ಲಿದ್ದಾರೆ. ಅದನ್ನು ಬಿಟ್ಟು ಇಲ್ಲ, ಅವರೂ ಕೂಡ ಸಂಘಟಿಸಿಕೊಂಡು ಉತ್ತಮ ಸ್ಥಿತಿಯಲ್ಲಿದ್ದಾರೆಂದು ನಾನು ಹೇಳಿಕೊಳ್ಳುವುದಕ್ಕೆ ತಯಾರಾಗಿಲ್ಲ. ಬಸ್ಸಿನಲ್ಲಿ ನಮ್ಮನ್ನು ಪಕ್ಕದಲ್ಲಿ ಕೂಡಿಸುತ್ತಿರಲಿಲ್ಲ. ಈಗ ಪಕ್ಕದಲ್ಲಿ ಕೂಡಿಸುತ್ತಿದ್ದಾರೆ. ಆಗಅನವ ಜೊತೆಯಲ್ಲಿ ಮಾತನಾಡುತ್ತಿರಲಿಲ್ಲ. ಈಗ ಮಾತನಾಡುತ್ತಿದ್ದಾರೆ. ಇದನ್ನು ಬಿಟ್ಟರೆ ಅವರ ಸ್ಥಿತಿ ಇನ್ನೂ ಹಾಗೆಯೇ ಇದೆ. ಯಾವ ವಿಧದಲ್ಲೂ ಬದಲಾವಣೆಯಾಗಿಲ್ಲ. ಬದಲಾವಣೆಯಾಗಿದ್ದಾರೆ ಎಂದು ಹೇಳಿಕೊಳ್ಳುವುದಕ್ಕೆ ನಾನು ತಯಾರಾಗಿಲ್ಲ. ನಮ್ಮಂಥ ಸ್ಥಿತಿಯಲ್ಲಿರತಕ್ಕಂತಹವರಿಗೂ ಹರಿಜನ-ಗಿರಿಜನರಿಗಾಗಿ ಕೊಡತಕ್ಕಂತಹ ಅನುಕೂಲತೆಯನ್ನು ಕೊಡಬೇಕೆಂದರೆ ಯಾರೂ ಒಪ್ಪುವುದಿಲ್ಲ. ಬೆಂಗಳೂರಿನಲ್ಲಿರತಕ್ಕಂತಹ, ದಾವಣಗೆರೆಯಲ್ಲಿರತಕ್ಕಂತಹ ಹಾಗೂ ಶಿವಮೊಗ್ಗದಲ್ಲಿರತಕ್ಕಂತಹ ಕೆಲವು ವಿದ್ಯಾವಂತ ಹುಡುಗರನ್ನು ನೋಡಿ ಇವರಂತೆ ಎಲ್ಲರೂ ಉದ್ಧಾರವಾಗಿದ್ದಾರೆ ಎಂಬುದಾಗಿ ಹೇಳಬಹುದು ನೂರಕ್ಕೆ ನೂರೂ ಸುಳ್ಳು.

೧೯೪೭ರಲ್ಲಿ ಹರಿಜನರ ಸಂಖ್ಯೆ ಎಷ್ಟಿತ್ತು ? ಇವತ್ತು ಅವರ ಸಂಖ್ಯೆ ಎಷ್ಟಿದೆ ? ಅವರ ವಿದ್ಯಾಭ್ಯಾಸದ ಸಂಖ್ಯೆ ಅವತ್ತು ಎಷ್ಟಿತ್ತು. ಇವತ್ತು ಎಷ್ಟಿದೆ ? ಎರಡನ್ನು ಹೋಲಿಸಿದರೆ ಖಂಡಿತವಾಗಿ ಅವರು ವಿದ್ಯಾಭ್ಯಾಸದಲ್ಲಿ ಮುಂದುವರಿದಿಲ್ಲವೆಂದು ಹೇಳುತ್ತೇನೆ. ಈಗ ಬೆಂಗಳೂರಿನಲ್ಲಿ ನಾಲ್ಕು ಸಾವಿರ ಹರಿಜನರನ್ನು ಕಾಣಬಹುದು. ದಾವಣಗೆರೆಯಲ್ಲಿ ಮೂರು ಸಾವಿರ ಕಾಣಬಹುದು ; ಗುಲ್ಬರ್ಗದಲ್ಲಿ ಎರಡು ಸಾವಿರ ವಿದ್ಯಾರ್ಥಿಗಳನ್ನು ಕಾಣಬಹುದು. ಆ ಜನಸಂಖ್ಯೆಯನ್ನು ೧೯೪೭ ರಿಂದ ೧೯೬೬ರ ವರೆವಿಗೂ ಲೆಕ್ಕ ಹಾಕಿದರೆ, ವಿದ್ಯಾಭ್ಯಾಸದಲ್ಲಿ ಅವರು ಮುಂದೆ ಬಂದಿಲ್ಲ. ಅದು ನನಗೆ ಖಂಡಿತವಾಗಿ ಗೊತ್ತಿದೆ. ಈ ಸ್ಥಿತಿಯಲ್ಲಿ ವಿದ್ಯಾವಂತ ಅಧಿಕಾರಿಗಳಾಗಿರತಕ್ಕ, ಹರಿಜನರ, ಗಿರಿಜನರ ಹೆಸರುಗಳನ್ನು ಹೇಳಿಕೊಂಡು ಊಟ ಮಾಡಿ ಅದರ ಋಣ ತಿಂದಿರತಕ್ಕ ಜನ ಇದ್ದಾರೆ. ಈ ಜನ ಇವತ್ತು ತಮ್ಮದೇ ಆದ ಒಂದು ಸಮಾಜವನ್ನು ಮಾಡಿಕೊಂಡಿದೆ. ಆ ರೀತಿ ಮಾಡುತ್ತಿಲ್ಲವೆಂದು ಹೇಳಿದರೆ ಅವರು ನೈತಿಕ ಅಧೋಗತಿಗೆ ಹೋಗುತ್ತಾರೆ. ನಾನು ಈ ದಿನ ಡಾಕ್ಟರ್ ಆಗಿದ್ದೇನೆ. ನನ್ನ ಮನೆಯನ್ನು ದಾವಣಗೆರೆಯಲ್ಲಿ ಕಟ್ಟಿದ್ದೇನೆ. ನಮ್ಮ ಸ್ವಂತ ಊರಿನಲ್ಲಿ ಏಕೆ ಕಟ್ಟಲ್ಲಿಲ್ಲ ? ಎನ್ನನ್ನು ಸೇರಿಸಿ ಹೇಳುತ್ತಾ ಇದ್ದೇನೆ. ಈ ರೀತಿ ಹರಿಜನರಲ್ಲಿ ಅನೇಕ ವರ್ಗಗಳಿವೆ, ಅಂದರೆ ವಿದ್ಯಾರ್ಥಿಗಳಲ್ಲಿ ಒಂದು ವರ್ಗ, ಅಧಿಕಾರಿಗಳಲ್ಲಿ ಒಂದು ವರ್ಗ, ಮುಂದುವರಿದವರಲ್ಲಿ ಒಂದು ವರ್ಗ, ೮೮ ಭಾಗ ಹಳ್ಳಿಗಳಲ್ಲಿ ಇರತಕ್ಕ ಜನರು ಒಂದು ವರ್ಗ, ಹೀಗೆ ಅನೇಕ ವರ್ಗಗಳು ನಿರ್ಮಾಣವಾಗಿವೆ. ಹಳ್ಳಿಗಳಲ್ಲಿರತಕ್ಕ ಜನರ ಜೊತೆ ಸಂಪರ್ಕ ಬೆಳೆಸುವುದಿಲ್ಲ, ಸಂಬಂಧ ಬೆಳೆಸುವುದಿಲ್ಲ. ಅವರು ಮನೆಗೆ ಹೋಗಿ ಊಟ ಮಾಡುವುದಿಲ್ಲ. ನಾನು ಹೋಗಿ ಮಾಡುತ್ತೇನೆಂದು ಯಾರಾದರೂ ಒಬ್ಬ ಸದಸ್ಯರು ಹೇಳಬಹುದು. ಆದರೆ, ಅದು ಒಬ್ಬ ವ್ಯಕ್ತಿಗೆ ಮಾತ್ರ ಅನ್ವಯಿಸುತ್ತದೆ. ಇವತ್ತು ಅಧಿಕಾರಿಗಳು ಊರಿಗೆ ಬಂದರೆ, ಅವರ ಮನೆ ಅದೇ ಊರಿನಲ್ಲಿದ್ದರೂ, ಅವರು ಟಿ.ಬಿ.ಯಲ್ಲಿ ಉಳಿಯುತ್ತಾರೆ. ಅವರವರ ಮನೆಗೆ ಹೋಗಿ ಯಾರೂ ಊಟ ಮಾಡುವುದಿಲ್ಲ. ಇತರರು ಬೈದು ನಮಗೆ ಹೇಳುತ್ತಾರೆ. ಲಿಂಗಾಯಿತರನ್ನು, ಬ್ರಾಹ್ಮಣರನ್ನು, ಬೈಯುತ್ತಿರಲ್ಲಾ, ನಿಮ್ಮ ಜನಕ್ಕೆ ಏನು ಮಾಡಿದಿರಿಯೆಂದು ಕೇಳುತ್ತಾರೆ ? ಈ ರೀತಿ ಪ್ರಶ್ನೆ ಕೇಳಿದಾಗ, ನಾನು ಏನನ್ನು ಹೇಳುವುದಕ್ಕೆ ಹಕ್ಕಿರುವುದಿಲ್ಲ. ಇದೇ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ಹನುಮಂತ ವಾರಾಳ ಎಂದು ಇದ್ದರು. ಅವರು ಡಾ॥ ಅಂಬೇಡ್ಕರ್ ಅವರ ನಿಕಟಪರ್ತಿಯಾಗಿ ಧಾರವಾಡದಲ್ಲಿ ಒಂದು ಹಾಸ್ಟೆಲ್ ಪ್ರಾರಂಭ ಮಾಡಿದರು. ಡಾ॥ ಅಂಬೇಡ್ಕರ್ ಅವರ ಸಲುವಾಗಿ ಆಗಾಗ ಧಾರವಾಡಕ್ಕೆ ಬಂದು ಹೋಗುತ್ತಾ ಇದ್ದರು. ಆಗ ಅಂಬೇಡ್ಕರ್ ಕೊನೆಯ ದಿವಸ ಹೇಳಿದರಂತೆ, ಬುದ್ದಿಸಮ್ ಎಮ್‌ರೆಸ್ ಮಾಡುವುದಕ್ಕಿಂತ ಮೊದಲೇ ಹೇಳಿದಂತೆ, ನಾನು ಮಾಡಿದ ಉದ್ದೇಶ ಏನೂ ಸಫಲವಾಗಲಿಲ್ಲ. ನಮ್ಮ ಜನ ವಿದ್ಯಾವಂತರಾಗಲಿ ರಾಜಕೀಯವಾಗಿ ಮುಂದೆ ಬರಲಿ ಅಧಿಕಾರಿಗಳಾಗಲಿಯೆಂದು ಎಷ್ಟು ಪ್ರಯತ್ನ ಪಟ್ಟರೂ, ನಮ್ಮ ಹಳ್ಳಿಗಳಲ್ಲಿರತಕ್ಕ ಜನರನ್ನು ತಿರಸ್ಕರಿಸಿ ತಾವೇ ಒಂದು ಸ್ವತಂತ್ರವಾದ ಒಂದು ಸಮಾಜ ಸೃಷ್ಟಿ ಮಾಡಿದ್ದಾರೆಂದು ಹೇಳಿದರಂತೆ. ಊರು ಇದ್ದ ಕಡೆ ಹೊಲಗೇರಿ ಇದ್ದೇ ಇರುತ್ತದೆ. ಎಲ್ಲಿಯವರೆವಿಗೂ ಜನಕ್ಕೆ ಜಾತಿ ಇರುತ್ತದೋ ಅಲ್ಲಿಯವರೆವಿಗೂ ಜಾತಿವಾದ ಇದ್ದೇ ಇರುತ್ತದೆ. ಅವರು ಯಾವತ್ತು ಮುಂದೆ ಬರುತ್ತಾರೆಂದು ಡಾ॥ ಅಂಬೇಡ್ಕರ್ ಕಣ್ಣೀರು ಹಾಕುತ್ತಾ ಇದ್ದರಂತೆ. ಈ ಬಗ್ಗೆ ಏನಾದರೂ ಲಿಟರೇಚರ್ ಬೇಕಾದರೆ, ನಮ್ಮ ದಿವಂಗತ ಸ್ನೇಹಿತರಾದ ಶ್ರೀ ಕೆ. ತಿಮ್ಮಯ್ಯನವರ ಮನೆಯಲ್ಲಿ ಇನ್ನು ಪ್ರಕಟವಾಗದೆ ಇರತಕ್ಕ ಕೈಬರಹ ಇದೆ. ಸಮಾಜಕ್ಕೆ ಏನು ಮಾಡಬೇಕಾಗಿತ್ತೋ, ಅದನ್ನು ನಾನು ಮಾಡಲಿಲ್ಲ. ನನ್ನ ಕರ್ತವ್ಯದಲ್ಲಿ ಲೋಪವಾಗಿದೆಯೆಂದು ಕೊನೆಗೆ ಹೇಳುತ್ತಾರೆ. ಈ ಸ್ಥಿತಿಯಲ್ಲಿ ಹರಿಜನರಲ್ಲಿ, ಮತ್ತು ಗಿರಿಜನರಲ್ಲಿ ಎರಡು ವರ್ಗವಿರುವುದು ನಿಜವಾದ ಸಂಗತಿ. ಅದನ್ನು ಎಲ್ಲರು ಒಪ್ಪುತ್ತಾರೆ. ಈ ಬಗ್ಗೆ ಇನ್ನೊಂದು ಸೀರಿಯಸ್ಸಾಗಿ ಹೇಳಲು ಬಯಸುತ್ತೇನೆ. (೧) ಮಿಸಲಾತಿ ಬಗ್ಗೆ ಇವತ್ತಷ್ಟೇ ಹೇಳಲಿಲ್ಲ. ಮಿಸಲಾತಿ ಪಡೆದು ವಿದ್ಯಾವಂತರಾಗಿ, ಅನುಕೂಲ ಹೊಂದಿದವರಿಗೆ. ಮತ್ತೇ ಮಿಸಲಾತಿ ಕೊಡುವುದು ಬೇಡವೆಂದು ಕಳೆದ ೧೦ ವರ್ಷಗಳಿಂದ ಹೇಳುತ್ತಾ ಬಂದಿದ್ದೇನೆ. ನನ್ನ ಸ್ನೇಹಿತರೊಬ್ಬರು ದಾವಣಗೆರೆಯಲ್ಲಿದ್ದಾರೆ. ತಮಗೂ ಗೊತ್ತಿರಬಹುದು. ಒಂದೊಂದು ಸಲ ನಾನು ಅವರು (ಪಂಂತ್ರಿಗಳಾಗಿದ್ದರು) ಫ್ಲಾಟ್‌ಫಾರಂನಲ್ಲಿ ಜಗಳ ಆಡಿದ್ದು ಉಂಟು. ನಾನು ಅವರನ್ನು ಕೇಳಿದೆ. ತಾವು ಮುಂದೆ ಬಂದು ಏನು ಮಾಡಿದಿರಿ ? ೨೦ ವರ್ಷಗಳ ಕಾಲ ಮಂತ್ರಿಗಳಾಗಿದ್ದಿರಿ, ಅಧ್ಯಕ್ಷರಾಗಿದ್ದಿರಿ, ಶಾಸಕರಾಗಿದ್ದಿರಿ, ಸಮಾಜಕ್ಕೆ ಏನು ಮಾಡಿದಿರಿ ? ತಾವು ಒಬ್ಬರೆ ಮುಂದೆ ಬಂದು ಬೆಂಗಳೂರಿನಲ್ಲಿ ವಾಸ ಮಾಡಿಕೊಂಡು ಇದ್ದು ಬಿಟ್ಟರೆ ಆಗಿಹೋಯಿತೆ ? ಅದಕ್ಕೆ ಅವರು ಹೇಳಿದರು, ಏನಪ್ಪ ಮಾಡುವುದು ೧೧ ಕೋಟಿ ಜನರು ಇದ್ದಾರೆ. ಇವರನ್ನೆಲ್ಲಾ

ಉದ್ಧಾರ ಮಾಡುವುದಕ್ಕೆ ಆಗುತ್ತದೆಯೆ ? ಎಂದು ಹೇಳಿದರು. ಅದನ್ನು ನಾವು ಹೇಳತಕ್ಕ ಮಾತಲ್ಲ. ಈರೀತಿಯಾದರೆ ನಮ್ಮ ಹುಟ್ಟನ್ನು ನಾವೇ ಪ್ರಶ್ನೆ ಮಾಡಿಕೊಂಡ ಹಾಗೆ ಆಗುತ್ತದೆ. ೧೧ ಕೋಟಿ ಜನ ಅಜ್ಞಾನದಲ್ಲಿದ್ದಾರೆ ; ಹಳ್ಳಿಗಳಲ್ಲಿದ್ದಾರೆ. ನಮ್ಮ ಮಾತನ್ನು ಅವರು ಕೇಳುವುದಿಲ್ಲವೆಂದು ನಾವು ಅವರನ್ನು ಹಾಗೆಯೇ ಬಿಡಲು ಆಗುತ್ತದೆಯೆ ? ಇದರಿಂದ ನಮ್ಮ ಕರ್ತವ್ಯದಲ್ಲಿ ಲೋಪ ಮಾಡಿಕೊಂಡ ಹಾಗೆ ಆಗುತ್ತದೆ. ನಾವು ಇವತ್ತು ೧೧ ಕೋಟಿ ಜನಗಳ ಬಗ್ಗೆ ಚಿಂತನೆ ಮಾಡದಿದ್ದರೆ, ಬೇರೆ ಯಾರು ಚಿಂತನೆ ಮಾಡುತ್ತಾರೆ ? ೧೦ ಸಾವಿರಕ್ಕಿಂತ ಜಾಸ್ತಿ ವರಮಾನ ಇರತಕ್ಕ ಮಕ್ಕಳಿಗೆ ಸ್ಕಾಲರ್‌ಷಿಪ್ ಕೊಡುವುದಿಲ್ಲವೆಂದು ಸರ್ಕಾರದಲ್ಲಿ ಆಜ್ಞೆಯಿದೆ. ೧೯ ಸಾವಿರದಿಂದ ೧೫ ಸಾವಿರ ಮಾಡಿ, ಇಲ್ಲದಿದ್ದರೆ ೨೦ ಸಾವಿರ ಮಾಡಿ ನನ್ನ ಆಭ್ಯಂತರ ಇಲ್ಲ. ಆದರೆ, ಅದರಿಂದ ಒಬ್ಬರಿಗಾದರೂ ಅನುಕೂಲವಾಗಲಿ. ದೇವರು ನನ್ನ ಕೈಯಲ್ಲಿ ಅನ್ನ ಇಟ್ಟಿದ್ದಾನೆ. ನನ್ನ ಬದಲು ನನ್ನ ತಮ್ಮನ ಮಗನಿಗೆ ಸಿಗಲಿ ಎನ್ನುವ ಧಾರಾಳತ್ವ ನಮಗೆ ಏಕೆ ಬರಬಾರದು ? ಈ ತರಹ ಮಾಡಿದರೆ ನಾನು ಜಾತಿವಾದಿ, ಹರಿಜನ ವಿರೋಧಿಯಾಗುತ್ತೇನೆ. ನನ್ನ ಹಿರಿಯರಾದ ಶ್ರೀ ಬಸವಲಿಂಗಪ್ಪನವರು ಈಗ ಸ್ಥಳದಲ್ಲಿ ಇಲ್ಲ. ಈ ರೆಸಲ್ಯೂಷನ್ ಹಾಕುವಾಗ ಅವರನ್ನು ಭೇಟಿ ಮಾಡಿಯೇ ಹಾಕಿದ್ದೇನೆ. ಅವರನ್ನು ನಾನು ಬಿಟ್ಟಿಲ್ಲ. ನಾನು ಚಿಕ್ಕ ಹುಡುಗನಾಗಿದ್ದಾಗಿನಿಂದಲೂ ನನಗೆ ಅವರ ಆಶೀರ್ವಾದವಿದೆ. ಮತ್ತು ನನ್ನ ಮೇಲೆ ಅವರ ಪ್ರೀತಿ ಇದೆ. ನಾಲ್ಕು ಸಾರಿ ಇದನ್ನು ಹಾಕಬೇಕೆಂದಿದ್ದೇನೆ. ವೆಸ್ಟ್ ಬೆಂಗಾಲ್‌ಗೆ ನಮ್ಮ ಕಮಿಟಿ ಹೋಗಿತ್ತು, ನಾನು ಹೋಗಿರಲಿಲ್ಲ. ಆಗ ಹೇಳಿದರಂತೆ ನಮ್ಮ ದೇಶದಲ್ಲಿ ಅನ್‌ಟಚಬಿಲಿಟಿ ಇಲ್ಲವೆಂದೂ. Diplomacy is concealed hypocracy. ಯಾರಾದರೂ ಧೈರ್ಯವಾಗಿ ಹೇಳಿ ನಮ್ಮ ದೇಶದಲ್ಲಿ ಅನ್‌ಟಚಬಿಲಿಟಿ ಇಲ್ಲವೆಂದು. ಹಾಗೆ ಹೇಳಿದರೆ ನಾನು ಮುಖ ತೋರಿಸದೆ ಹೊರಟು ಹೋಗುತ್ತೇನೆ. Weare set of hypocrats ಮಾಡುವುದು ಒಂದು ಹೇಳುವುದು ಒಂದೂ. ಈ ದೇಶದಲ್ಲಿ ಅಸ್ಪೃಶ್ಯತೆ ಇಲ್ಲವೆಂದು ಯಾರು ಹೇಳಿದರೂ ಅದು ನೂರಕ್ಕೆ ನೂರು ಸುಳ್ಳು. ಇದರಲ್ಲಿ ಯಾವ ಸತ್ಯವೂ ಇಲ್ಲ. ಇಲ್ಲದೆ ಅಸ್ಪೃಶ್ಯತೆ ಹಾಗೆಯೇ ಉಳಿದಿದೆ. ಇವೊತ್ತು ಹರಿಜನರ ಮತ್ತು ಗಿರಿಜನರ ಸ್ಥಿತಿ ಏನಾಗಿದೆ ಎಂದರೆ, ನೀವು ಸವರ್ಣೀಯರ ಜೊತೆ ಜಗಳ ಮಾಡಬೇಡಿಯೆಂದು ಹೇಳುವಂಥ ಪರಿಸ್ಥಿತಿ ಬಂದಿದೆ. ಇನ್ನು ಎಷ್ಟು ವರ್ಷಗಳ ಕಾಲ ಇದೇ ರೀತಿ ಜೀವನ ಮಾಡಬೇಕು ? ಐದು ಸಾವಿರ ವರ್ಷಗಳಿಂದ ಅವರ ಆಶ್ರಯದಲ್ಲೇ ಬೆಳೆಯಬೇಕಾಗಿದೆ. ಮಾನ್ಯ ಗೋವಿಂದಗೌಡರಿಗೆ ಗೊತ್ತಿದೆ, ಮಲೆನಾಡಿನಲ್ಲಿ ಒಂದೊಂದು ಜಮೀನ್ದಾರರ ಮನೆಯಲ್ಲೂ ೫-೬ ಜನ ಹರಿಜನರು, ಹೊಲೆಯರು ಇರುತ್ತಾರೆ. ಅವರಿಗೆ ಬೆಳಿಗ್ಗೆ ಒಂದು ಪಾವು, ಸಂಜೆ ಒಂದು ಪಾವು ಅಕ್ಕಿ ಅಳೆದು ಕೊಡುತ್ತಾರೆ. ಮನೆಯಲ್ಲಿ ಒಂದು ಪಾವು ಹೆಚ್ಚಿಗೆ ಇಟ್ಟುಕೊಳ್ಳುವುದಕ್ಕೆ ಅವರಹತ್ತಿರ ಯಾವ ಸಾಮಾನು ಇಲ್ಲ. ಇದನ್ನು ಬೇಕಾದರೆ ಯಾರಾದರೂ ಬಂದರೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಐದು ಜನ ಇದ್ದರೆ ಐದು ಪಾವು ಕೊಡುತ್ತಾರೆ, ಮೂರು ಜನ ಇದ್ದರೆ ಮೂರು ಪಾವು ಕೊಡುತ್ತಾರೆ. ಅವರು ಕೊಟ್ಟಂತಹ ಧಾನ್ಯವನ್ನು ಆವೊತ್ತೆ ಅಡಿಗೆ ಮಾಡಿಕೊಂಡು ಕೆಲಸಕ್ಕೆ ಹೋಗಬೇಕು. ಸಂಜೆ ಬಂದು ಮತ್ತೇ ಧಾನ್ಯವನ್ನು ತೆಗೆದುಕೊಳ್ಳಬೇಕು. ಯಾರಾದರೂ ನೆಂಟರು ಬಂದರೆ, ಅಥವಾ ಸತ್ತರೆ, ಜಮೀನಿನ್ದಾರರ ಯಜಮಾನ ಬಂದು ನೋಡಿಕೊಂಡು ಹೋದರೆ ಮತ್ತೊಮ್ಮೆ ಇನ್ನೊಂದು ಪಾವು ಕೊಡುತ್ತಾರೆ. ನಾವು ಬಾಂಡೆಡ್ ಲೇಬರ್ಸ್ ಅಬಾಲಿಷ್ ಮಾಡಿದ್ದೇವೆಂದು ಇಲ್ಲಿ ಹೇಳುತ್ತೇವೆ. ಈ ತರಹ ಎಷ್ಟು ಹಳ್ಳಿಗಳಲ್ಲಿ ಇಲ್ಲ. ಕುಂದಾಪುರ ತಾಲ್ಲೂಕಿನಲ್ಲಿ ತೋರಿಸಲೇ ? ಬಂಟ್ವಾಳದಲ್ಲಿ ತೋರಿಸಲೇ ? ಇದು ಎಲ್ಲಾ ಕಡೆಯೂ ಇದೆ. ಇವತ್ತು ನಾನು ವಿದ್ಯಾವಂತನಾಗಿ ಡಾಕ್ಟರ್ ಆಗಿದ್ದೇನೆ, ಮತ್ತೊಬ್ಬರು ಶಾಸಕರಾಗಿರಬಹುದು. ನಾನು ಇವೊತ್ತು ಆಸ್ತಿ ಮಾಡಿಕೊಳ್ಳಬಹುದು. ಬಿಡಬಹುದು, ಅದು ಪ್ರಶ್ನೆಯಲ್ಲ, ಇವತ್ತು ಪ್ರತಿಯೊಂದು ಹಳ್ಳಿಯಲ್ಲೂ ೯೯ ಪರ್ಸೆಂಟ್ ಬಡವರನ್ನು ಇಟ್ಟುಕೊಂಡು ನಾವು ಅವರ ಪ್ರತಿನಿಧಿಗಳು ಎಂದು ಹೇಳಿಕೊಳ್ಳುವುದಕ್ಕೆ ಖಂಡಿತವಾಗಿ ಒಪ್ಪುವುದಿಲ್ಲ. ಆರ್ಥಿಕವಾಗಿ ಸಾಮಾಜಿಕವಾಗಿ, ವಿದ್ಯಾಭ್ಯಾಸದ ದೃಷ್ಟಿಯಿಂದಲೂ ಕೂಡ ೧೦೦ ಅಥವಾ ೯೦ ಪರ್ಸೆಂಟ್ ಹರಿಜನರು ಹಿಂದುಳಿದಿದ್ದಾರೆ. ವಿದ್ಯಾಮಂತ್ರಿಗಳು ಈ ಜನಕ್ಕೆ ಏನು ಮಾಡಿದ್ದಾರೆ ? ಜ್ವರ ಬಂದರೆ ಮಾತ್ರೆಗಳಿಗೆ ಕೊಟ್ಟಹಾಗೆ, ಉಪ್ಪಿಟ್ಟರ್ಬಿ ಕೊಡುತ್ತೇವೆ, ಸಂಗೀತ ಹೇಳಿಸುತ್ತೇವೆ. ಟ್ರಾನ್ಸಿಸ್ಟರ್ ಹಾಕಿಸುತ್ತೇವೆ, ಇದನ್ನೆಲ್ಲಾ ಹೇಳಿಕೊಂಡು ನಾವು ಇದುವರೆವಿಗೂ ಏನು ಮಾಡಿದ್ದೀರಿ ?

ಒಬ್ಬ ಮಾನ್ಯ ಸದಸ್ಯರು.—ಮೇಲಿಂದ ಮೇಲೆ ಅವರು ಹರಿಜನರು ಹರಿಜನರು ಎಂದು ಹೇಳುತ್ತಾರೆ, ಪೆಡ್ಯೂಲ್ಡ್ ಕ್ಯಾಸ್ಟ್ ಎಂದು ಹೇಳಿ.

ಶ್ರೀ ಬಿ. ಎಮ್. ತಿಪ್ಪೇಸ್ವಾಮಿ.—ಹರಿಜನ ಎನ್ನುವ ಪದಕ್ಕೆ ನಾನು ಕಟ್ಟಾ ವಿರೋಧಿ, ಹರಿಜನ ಎಂದು ಮೊದಲು ತಿಳಿಸತಕ್ಕವನಲ್ಲಿ ನಾನು ಒಬ್ಬ. ಆದರೆ ನಾನು ಹರಿಜನ ವಿರೋಧಿಯಲ್ಲ.

೧—೦೦ ಪಿ. ಎಂ,

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಸದಸ್ಯರು ಮೊದಲಿನಿಂದಲೂ ಹರಿಜನ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ. ಎಂ. ತಿಪ್ಪೇಸ್ವಾಮಿ.—ಹರಿಜನ ಎನ್ನುವ ಪದಕ್ಕೆ ನಾನು ಡೆಡ್ ಎಗೆನೆಸ್ಟ್. ಹರಿಜನ ಎನ್ನುವ ತತ್ವವನ್ನು ಮೊದಲಿನಿಂದಲೂ ತಿರಸ್ಕರಿಸಿರುವವನು ನಾನು. ಆಕಸ್ಮಾತ್ ಆಗಿ ರೂಢಿಯಲ್ಲಿ ಆ ಪದ ಬರುತ್ತದೆ. ಹರಿಜನ ಎನ್ನುವ ಶಬ್ದಕ್ಕೆ ನಾನು ಮೊದಲಿನಿಂದಲೂ ವಿರೋಧವಾಗಿದ್ದೇನೆ, ಪ್ರಾಥಮಿಕ ಶಾಲೆಗಳಲ್ಲಿ ನೂರಕ್ಕೆ ೯೦ ಭಾಗ ಡ್ರಾಪ್ ಔಟ್ಸ್ ಆಗತಕ್ಕ ಮಕ್ಕಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಸಂವಿಧಾನದ ಪ್ರಕಾರ ಈಗ ಕೊಟ್ಟಿರತಕ್ಕ ಸವಲತ್ತುಗಳನ್ನು ನಾವು ಕೆಲವೇ ಜನ ಉಪಯೋಗಿಸಿಕೊಳ್ಳುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಅದೇನೆಂದರೆ ನಾನು ಈ ನಿರ್ಣಯವನ್ನು ಮಾಡಿದ್ದೇನೆ, ಅದನ್ನು ಸೆಕೆಂಡ್ ಮಾಡಿದವರು ಮಾನ್ಯ ಬಸವಲಿಂಗಪ್ಪನವರು, ಈಗ ಅವರು ಸಭೆಯಲ್ಲಿಲ್ಲವೆಂದು. ಹೇಳುವುದು ಒಂದು ಮಾಡುವುದು ಒಂದು ಎನ್ನುವ ಅರ್ಥ ಬರಬಾರದು. ನೇರವಾಗಿ ಈಗ ಅವರು ಏನು ಹೇಳಬೇಕೋ ಅದನ್ನು ಹೇಳಲಿ, ಮಾನ್ಯ ಬಸವಲಿಂಗಪ್ಪನವರೂ ಸಭೆಯಲ್ಲಿದ್ದಾರೆ.

ಶ್ರೀ ಬಿ. ಎಂ. ತಿಪ್ಪೇಸ್ವಾಮಿ.—ನನಗೆ ವಿಷಯವನ್ನು ಟ್ವಿಸ್ಟ್ ಮಾಡುವುದಕ್ಕೆ ಬರುವುದಿಲ್ಲ. ಇದನ್ನು ಅವರಿಗೆ ತೋರಿಸಿದ್ದೇನೆಂದು ಹೇಳಿದ್ದೇನೆ, ಅವರು ಒಪ್ಪಿಗೆ ಕೊಟ್ಟಿದ್ದಾರೆಂದು ನಾನು ಹೇಳಲಿಲ್ಲ. ರಾಜಕೀಯವಾಗಿ ಹೇಗೆ ತಿರುಗಿಸಬೇಕೆನ್ನುವುದು ನನಗೆ ಬರುವುದಿಲ್ಲ. ರಾಜಕೀಯಕ್ಕೆ ನಾನಿನ್ನು ಹೊಸಬ. ಅವರು ಹೇಳಿದ ಹಾಗೆ ನನಗೆ ಹೇಳುವುದಕ್ಕೆ ಬರುವುದಿಲ್ಲ. ಮಾನ್ಯ ಬಸವಲಿಂಗಪ್ಪನವರಿಗೆ ತೋರಿಸಿದ್ದೇನೆಂದು ಹೇಳಿದ್ದೇನೆ. ಪರಿಶಿಷ್ಟ ಜಾತಿ ಮತ್ತು ವರ್ಗಗಳವರಿಗೆ ಈಗ ಕೊಟ್ಟಿರತಕ್ಕ ಸವಲತ್ತುಗಳು ಇನ್ನು ೧೦ ವರ್ಷಗಳು ಇರಬಹುದು. ಇನ್ನು ಬಹಳ ವರ್ಷಗಳ ಕಾಲ ಇರಲಿ ನೂರು ವರ್ಷ ಬೇಕಾದರೂ ಇರಲಿ ನಾನು ಸಂತೋಷಪಡುತ್ತೇನೆ. ಎಷ್ಟು ವರ್ಷ ಬೇಕಾದರೂ ಇರಲಿ, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜನರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದೆ ಬರುವವರೆಗೆ ಆ ಸವಲತ್ತುಗಳು ಇರಲಿ ಎನ್ನುವವರ ಪೈಕಿ ನಾನಂ. ನಾವು ಸ್ವಲ್ಪ ಉತ್ಪ್ರಮಾಗಿರಬಹುದು. ನನ್ನ ಕಣ್ಣಿಗೆ ಕಾಣಿಸತಕ್ಕವರು ಕಸ ಹೊಡೆಯುವವರು, ಕೂಲಿ ಮಾಡುವವರು, ಮೂಟೆ ಹೊರುವವರು, ಬೇರೆಯವರ ಕಣ್ಣಿಗೆ ಗುಮಾಸ್ತರು, ಹೈಸ್ಕೂಲ್ ಟೀಚರ್ಸ್ ಅದಕ್ಕಿಂಥ ಕೆಳಗಿರತಕ್ಕ ನೌಕರರು ಅವರ ಕಣ್ಣಿಗೆ ಕಾಣಿಸುತ್ತಾರೆ. ನಾವು ದಾರಿಯಲ್ಲಿ ನಡೆದುಕೊಂಡು ಹೋಗುವಾಗ ಕೆಲವರು ನೆಟ್ಟಗೆ ನೋಡುತ್ತಾರೆ. ಕೆಲವರು ಮೇಲೆ ನೋಡುತ್ತಾರೆ ಕೆಲವರು ಕೆಳಗೆ ನೋಡುತ್ತಾರೆ ಅವರ ಕಣ್ಣಿನ ದೃಷ್ಟಿ ಹಾಗಿರುತ್ತದೆ. ನಾವು ಧೈರ್ಯವಾಗಿ ದೇವರು ಕೊಟ್ಟಿರುವ ಅವಕಾಶದಲ್ಲಿ ಕೆಲಸವನ್ನು ಮಾಡಬೇಕು. ನಾವು ನಮ್ಮ ಮಕ್ಕಳು ಮುಂದೆ ಬರಬಹುದು. ಆದರೆ ನಾವು ಕೆಲಸ ಮಾಡದಿದ್ದರೆ ನಮ್ಮ ತಮ್ಮನ ಮಕ್ಕಳು ಹೇಗೆ ಮುಂದೆ ಬರುತ್ತಾರೆ ? ದಯಮಾಡಿ ಯಾರೂ ತಪ್ಪು ಭಾವಿಸಿಕೊಳ್ಳಬಾರದು, ನಾನು ಏಸಲಾತಿಯ ವಿರೋಧಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ದೇವರು ಕೊಟ್ಟಿದ್ದಲ್ಲ, ಸಂವಿಧಾನ ಕೊಟ್ಟಿದ್ದು ದು.

ಶ್ರೀ ಬಿ. ಎಂ. ತಿಪ್ಪೇಸ್ವಾಮಿ.—ಸಂವಿಧಾನದಲ್ಲಿ Irrspective of the income of the Scheduled Castes ಎಂದು ಇದೆ ಅದನ್ನು ನೋಡಿ. We should become more magnanimous ಮಾನ್ಯ ಬಸವಲಿಂಗಪ್ಪನವರು ಒಂದೆರಡು ಪರ್ಸೆಂಟ್ ಬರಬಹುದು ಅದನ್ನು ಏತಕ್ಕೆ ಮಾಡುತ್ತೀರಿ ಎಂದರು. ಅನುಕೂಲವಾಗಲಿ ೧೦ ಜನಗಳಿಗೆ ಒಳ್ಳೆಯದಾಗಲಿ ಅಷ್ಟೆ ಸಾಕಂ. ನನಗೆ

ಬರೀವುದಕ್ಕೆ ಬದಲಾಗಿ ನನ್ನ ತಮ್ಮನ ಮಗನಿಗೆ ಬರಲಿ. ತಾವು ಕೂಡ ಸಹಕರಿಸಿ ಇದಕ್ಕೆ ಸಪೋರ್ಟ್ ಮಾಡಿ, ಅದರ ಆಗುಹೋಗುಗಳು ಏನು ಎನ್ನುವುದು ನನಗೆ ಗೊತ್ತಿದೆ. ಮಾತನಾಡುವುದರಿಂದ ಬದಲಾವಣೆಯಾಗುತ್ತದೆಂದು ನಾನು ಹೇಳುವುದಿಲ್ಲ. ಇದು ಕೇಂದ್ರ ಸರ್ಕಾರದ ಪಾರ್ಲಿಮೆಂಟಿನ ಮುಂದೆ ಹೋಗಬೇಕು, ಎಲ್ಲಾ ರಾಜ್ಯಗಳು ಒಪ್ಪಬೇಕು. ಇದು ಸುಲಭವಾದ ಸಮಸ್ಯೆಯಲ್ಲ. ಇನ್ನೊಬ್ಬರ ಕೈಯಲ್ಲಿ ಹೇಳಿಸಿಕೊಳ್ಳುವುದಕ್ಕಿಂತ ನಾವೇ ಮಾಡಿ ತೋರಿಸಬೇಕೆನ್ನುವ ಉದ್ದೇಶದಿಂದ ತಂದಿದ್ದೇನೆ. ವೈಯಕ್ತಿಕವಾಗಿ ನನ್ನ ಹೆಸರು ಬರಬೇಕೆನ್ನುವ ಉದ್ದೇಶದಿಂದ ಇದನ್ನು ಏನೂ ತಂದಿಲ್ಲ, ದೇವರಲ್ಲಿ ನನಗೆ ನಂಬಿಕೆ ಇಲ್ಲ. ಮಾನ್ಯ ಬಸವಲಿಂಗಪ್ಪನವರು ಯಾವಾಗಲಾದರೂ ತಿರುಪತಿಗೆ ಹೋಗುತ್ತಾರೆ. ನಾನು ತಿರುಪತಿಗೆ ಹೋಗಿಲ್ಲ. ದೇವರ ಪೂಜೆಯನ್ನು ಎಂದೂ ಮಾಡುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ತಿರುಪತಿಗೆ ಒಂದೆರಡು ಸಲ ಹೋಗಿದ್ದರೂ ಹೋಗಿರಬಹುದು. ನಾನು ಎಕ್ಸಾಮಿನೇಷನ್ ಕೆಲಸದ ಮೇಲೆ ಮೂರು ದಿವಸಗಳ ಕಾಲ ತಿರುಪತಿಯಲ್ಲಿದ್ದೆ. ಆದರೂ ನಾನು ದೇವರ ದರ್ಶನಕ್ಕೆ ಹೋಗಲಿಲ್ಲ. ನನಗೆ ದೇವರಲ್ಲಿ ನಂಬಿಕೆಯಿಲ್ಲ. ನೀವು ದೃಢ ಮನಸ್ಸಿನಿಂದ ಇದನ್ನು ಪಾಸ್ ಮಾಡಿ. ಇದನ್ನು ಪಾಸ್ ಮಾಡಿದರೂ ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಎಕ್ಸ್‌ಪ್ಲಾಯಿಟರ್ಸ್ ಆಗುವುದಿಲ್ಲ, ಎಲ್ಲಾ ಸಮಾಜದಲ್ಲಿಯೂ ಶೋಷಿತವರ್ಗದವರು ಇದ್ದಾರೆ. ಒಂದು ಜಾತಿಯವರು ವಿದ್ಯಾ ಸಂಸ್ಥೆಯನ್ನು ತೆರೆದರೆ ಅದರಿಂದ ಆ ಜಾತಿಯವರೆಲ್ಲಾ ಉದ್ಧಾರವಾಗುವುದಿಲ್ಲ. ಲಿಂಗಾಯಿತರು ವಿದ್ಯಾಸಂಸ್ಥೆಯನ್ನು ತೆರೆದರೆ ಅದರಿಂದ ಲಿಂಗಾಯಿತರೆಲ್ಲಾ ಉದ್ಧಾರವಾಗುವುದಿಲ್ಲ. ಅದೇ ರೀತಿ ಒಕ್ಕಲಿಗರು ವಿದ್ಯಾಸಂಸ್ಥೆಯನ್ನು ತೆರೆದರೆ ಅದರಿಂದ ಒಕ್ಕಲಿಗರೆಲ್ಲಾ, ಉದ್ಧಾರವಾಗುವುದಿಲ್ಲ ಎಕ್ಸ್‌ಪ್ಲಾಯಿ ಟೇಷನ್ ಇದ್ದೇ ಇದೆ. ನಾವು ಮುಂದೆ ಬರುವುದು ಯಾವಾಗ? ಇದೇ ಪ್ರೊಗ್ರೆಸ್‌ನಲ್ಲಿ ಹೋದರೆ ಒಂದು ಸಾವಿರ ವರ್ಷವಾದರೂ ಇಂಡಿಯಾದೇಶದಲ್ಲಿ ಒಬ್ಬರಿಗೆ ಒಂದಂ ಜೊತೆ ಮೆಟ್ಟು ಸಿಗುವುದಿಲ್ಲ, ಆಫ್ರಿಕಾ ದೇಶದಲ್ಲಿ ನೀಗ್ರೊ ಹುಡುಗ ಕೇಳುತ್ತಾನೆ. "Is it a fact that in your country people are walking bare-foot ?" ಒಂದು ಸಾವಿರ ವರ್ಷವಾದರೂ ಒಂದಂ ಜೊತೆ ಮೆಟ್ಟು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ ಅಂದರೆ ಇದನ್ನು ನೀವು ಹೇಗೆ ಸರಿಪಡಿಸುತ್ತೀರಿ ? ಬಹಳ ಧೈನ್ಯದಿಂದ ಕೇಳಿಕೊಳ್ಳುತ್ತೇನೆ ಈ ನಿರ್ಣಯಕ್ಕೆ ಪುರಸ್ಕಾರ ಕೊಡಬೇಕು ಮತ್ತು ಇದನ್ನು ಪಾಸ್ ಮಾಡಬೇಕು. ೧೦-೧೫ ಸಾವಿರ ರೂಪಾಯಿಗಳ ಇನ್‌ಕಂಲಿಮಿಟ್ ಏನಿದೆ ಅದನ್ನು ಚೇಂಜ್ ಮಾಡಿ ಇರತಕ್ಕ ಕಾನೂನನ್ನು ತಿದ್ದುಪಡಿ ಮಾಡಿದರೆ ಒಳ್ಳೆಯದೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಅಧ್ಯಕ್ಷರೆ, ಹಿರಿಯರಾದ ಡಾ ॥ ತಿಪ್ಪೇಸ್ವಾಮಿಯವರು ತಂದಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಬೆಂಬಲಿಸದೇ ಹೋದರೂ ಕೂಡ ಅವರ ನಿರ್ಣಯದ ಹಿಂದೆ ಇರತಕ್ಕ ತತ್ವ ಸ್ವಾಗತಾರ್ಹವಾದುದು. ಎನ ತಕ್ಕ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅವರು ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿದಹಾಗೆ ಈ ದೇಶದಲ್ಲಿ ಯಾವುದೇ ಜಾತಿಯವರು ಆಗಿರಲಿ ತೀರಾ ಹಿಂದುಳಿದಿರತಕ್ಕ ಜಾತಿ ಮಧ್ಯಮ ವರ್ಗದಲ್ಲಿರತಕ್ಕ ಜಾತಿ ಮತ್ತು ಉತ್ತಮ ಜಾತಿ ಯಾವುದೇ ಇರಲಿ, ಜಾತಿಗಳ ಹೆಸರಿನಲ್ಲಿ ಏನು ಸವಲತ್ತುಗಳನ್ನು ಸಂವಿಧಾನಾತ್ಮಕವಾಗಿ ಪಡೆಯುತ್ತಾರೆ ನಮ್ಮ ಕಾನೂನುಗಳಲ್ಲಿ ಒದಗಿಸಿಕೊಡುತ್ತೇವೆ ಆ ಸವಲತ್ತುಗಳನ್ನು ಯಾರಿಗೆ ತಲುಪಿಸಬೇಕೋ ಆ ಜಾತಿಯ ಜನಗಳಿಗೆ ತಲುಪಿಸುತ್ತಿಲ್ಲ. ಈ ವಿಚಾರದಲ್ಲಿ ಯಾರೂ ಕೂಡ ತೀವ್ರವಾದ ಭಿನ್ನಾಭಿಪ್ರಾಯವನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇನ್ನು ಮುಂದೆ ಹೋಗಿ ಹೇಳುವುದಾದರೆ, ಈಗ ನಾವು ಅಸ್ಪೃಶ್ಯರು ಎನ್ನುವ ಕಳಂಕವನ್ನು ಅವರು ಹೊಂದಿದ್ದಾರೆ. ಅದು ವಿದ್ಯಾವಂತರ ಮಟ್ಟಿಗೆ ಮಾತ್ರ ನಿವಾರಣೆಯಾಗಿದೆ. ಅಧಿಕಾರಿ ವರ್ಗಗಳ ಮಟ್ಟಿಗೆ ನಿವಾರಣೆಯಾಗಿದೆ, ಬುದ್ಧಿಜೀವಿಗಳ ಮಟ್ಟಿಗೆ ನಿವಾರಣೆಯಾಗಿದೆ. ರಾಜಕೀಯದಲ್ಲಿರತಕ್ಕವರ ಮಟ್ಟಿಗೆ ನಿವಾರಣೆಯಾಗಿದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕವರ ಮಟ್ಟಿಗೆ ಅಸ್ಪೃಶ್ಯರು ಎನ್ನುವ ಕೆಟ್ಟ ಕಳಂಕದಿಂದ ಅವರನ್ನು ಮುಕ್ತರಾಗಿಲ್ಲ ಎನ್ನುವುದು ಅಷ್ಟೆ ಸತ್ಯ. ಅವರಿಗೆ ಆರ್ಥಿಕವಾಗಿ ಭದ್ರವಾದಂತಹ ನೆಲೆಯನ್ನು ಕೊಡುವುದು ಬಹಳ ಮುಖ್ಯ. ಸಾಮಾಜಿಕ ಪರಿವರ್ತನೆ ತಾನೇತಾನಾಗಿ ಆಗುತ್ತದೆ. ಆರ್ಥಿಕ ಭದ್ರತೆಯ ಬುನಾದಿಯನ್ನು ಕೊಟ್ಟ ಕಾಲದಲ್ಲಿ ಅದೇ ಜನಾಂಗದವರು ಅಂದರೆ ಪರಿಶಿಷ್ಟ ಜಾತಿ ಮತ್ತು ವರ್ಗಗಳವರಿಗೆ ಸೇರಿದವರು, ಒಕ್ಕಲಿಗ ಜನಾಂಗಕ್ಕೆ ಸೇರಿದವರಂ, ಹಿಂದುಳಿದ ವರ್ಗಗಳವರಿಗೆ ಸೇರಿದವರು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಂ ಯಾವುದೇ ಜಾತಿಯನ್ನು

ತೆಗೆದುಕೊಳ್ಳಿ ಯಾರು ಜಾತಿಯ ಮುಂಚೂಣಿಯಲ್ಲಿರುತ್ತಾರೋ ಯಾರು ಜಾತಿಯ ನೇತೃತ್ವವನ್ನು ವಹಿಸಿಕೊಂಡಿರುತ್ತಾರೋ ಅವರೇ ಜಾತಿಯ ಶೋಷಕರು. ಜಾತಿಯ ಹೆಸರಿನಲ್ಲಿ ಪ್ರತಿಯೊಂದು ಸೌಲಭ್ಯವನ್ನು ತಾವೇ ಪಡೆಯತಕ್ಕ ಬ್ರಹ್ಮರಾಕ್ಷಸರು. ಈ ಒಂದು ಪ್ರವೃತ್ತಿ ಯಾವ ಜನಾಂಗದಲ್ಲಿ ಬೆಳೆಯುತ್ತಿದ್ದರೂ ಅದನ್ನು ಹತ್ತಿಕ್ಕಬೇಕು ಅದಕ್ಕೆ ಏತಕ್ಕೆ ಡಾ॥ ತಿಪ್ಪೇಸ್ವಾಮಿಯವರು ಲಘುವಾಗಿ ಟೀಕಿಸತಕ್ಕ ಪ್ರಯತ್ನ ಮಾಡಬೇಕು?

ಶ್ರೀ ಎಂ. ಎಸ್. ಪಾಟೀಲ್.—ಯಾರೂ ಟೀಕೆ ಮಾಡಿಲ್ಲ, ಯಾರೂ ಆ ರೀತಿ ಮಾತನಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಬ್ಬರೂ ಟೀಕೆ ಮಾಡಿಲ್ಲ. ಆದರೆ ಇವರ ಬಾಯಿಯಲ್ಲಿ ಏತಕ್ಕೆ ಈ ಮಾತು ಬಂತು? It is a conspiracy of caste Hindus to provoke him and to condemn the scheduled caste leadership that you have taken this step : I have to tell this because nobody has talked. What made you to provoke ?

Sri H. T. Krishnappa.—If I have given that impression to you, I am very sorry. At the same time I must feel sorry that you have not followed me. ಲಘುವಾಗಿ ಅಂದರೆ ಮಾತನಾಡತಕ್ಕ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳದೆ ಮಧ್ಯೆ ಪ್ರವೇಶ ಮಾಡಿ ವಿಚಾರ ಲಹರಿಯನ್ನು ಬದಲಾಯಿಸಿದರು. ಅದು ಪಾಪ ಕೃತ್ಯ. ಬಸವಲಿಂಗಪ್ಪನವರ ಬಗ್ಗೆ ಏನು ಕೆಟ್ಟದ್ದು ಮಾತನಾಡಿಲ್ಲ. ಗೌರವವಾದ ಭಾಷೆಯನ್ನೇ ಬಳಸಿದರು .....

ಅಧ್ಯಕ್ಷರು.—ಅವರು ಏನೂ ಮಾತನಾಡಿಲ್ಲ, ಏತಕ್ಕೆ ಸುಮ್ಮನೆ ಆರೋಪ ಮಾಡುತ್ತಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಅವರ ಆಶೀರ್ವಾದ, ಇವರ ಆಶೀರ್ವಾದ ಇದೆ ಎಂದು ಹೇಳಿದನೇ ಹೊರತು ಯಾವ ವಿಷಯದ ಮೇಲೂ ವಿರೋಧವಾಗಿ ಹೇಳಲಿಲ್ಲ. ಸುಮ್ಮನೆ ತಿಳಿವಳಿಕೆ ಇಲ್ಲದೆ ಮಾತನಾಡಿದರೆ ಹೇಗೆ ?

ಅಧ್ಯಕ್ಷರು.—ನಿಮ್ಮ ವಿಚಾರ ನೀವು ಹೇಳಿ, ಅವರ ವಿಚಾರ ಅವರು ಹೇಳಲಿ. ಈಗ ಒಬ್ಬರಿಗೊಬ್ಬರು ವಾದ ಮಾಡುವುದು ಬೇಡ, ಕುಳಿತುಕೊಳ್ಳಿ.

ಶ್ರೀ ಬಿ.ಎಂ. ತಿಪ್ಪೇಸ್ವಾಮಿ.—ಯಾರೂ ತಪ್ಪು ತಿಳಿದುಕೊಳ್ಳಬಾರದು. ನನ್ನ ಜನಾಂಗದವರು ಯಾರೂ ನನ್ನನ್ನು ತಿರಸ್ಕರಿಸಿಲ್ಲ. ನಿಮ್ಮ ಅಭಿಪ್ರಾಯ ಆ ರೀತಿ ಇದ್ದರೆ ತಪ್ಪು. ನಮ್ಮ ಜನ ವಿದ್ಯಾವಂತರಾಗಿದ್ದಾರೆ. ೧೦-೧೫ ಸಾವಿರ ರೂಪಾಯಿಂಗಳ ವರಮಾನ ಇರುವವರು ಎಂದು ಹೇಳಿರುವುದು ಸೂಕ್ತವಾಗಿದೆ. ಜವಾನರು ಗುಮಾಸ್ತರು ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಬರತಕ್ಕ ಸಂಬಳ ಎಷ್ಟು ಎಂದು ಕ್ಲಾರಿಫೈ ಮಾಡಿದ್ದೇನೆ. ಇದರಲ್ಲಿ ಯಾವುದೇ ಪಿತೂರಿ ಇಲ್ಲ. ಹಾಗೇನಾದರೂ ನಿಮ್ಮ ಮನಸ್ಸಿನಲ್ಲಿದ್ದರೆ ಅದನ್ನು ತೆಗೆದುಹಾಕಬೇಕು. ನನ್ನ ಸಮಾಜದಲ್ಲಿ ನನ್ನನ್ನು ಯಾರೂ ತಿರಸ್ಕಾರದಿಂದ ಕಂಡಿಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಯಾವುದೋ ಒಂದು ಜನಾಂಗಕ್ಕೆ ಸೀಮಿತವಾಗಿರತಕ್ಕ ನಿರ್ಣಯ ಇದಾಗಬಾರದಾಗಿತ್ತು. ಸಾರ್ವತ್ರಿಕವಾಗಿ ಎಲ್ಲಾ ಜನಾಂಗಕ್ಕೂ ಅವರು ಅಲ್ಪ ಸಂಖ್ಯಾತರಿರಲಿ, ಬಹು ಸಂಖ್ಯಾತರಿರಲಿ ಇದು ಅನ್ವಯವಾಗಬೇಕಾಗಿತ್ತು. ಇದು ಬರೀ ಹರಿಜನ ಗಿರಿಜನರಿಗೆ ಆಗಬಾರದೆಂಬ ದೃಷ್ಟಿಕೋನದಿಂದ ನಾನು ವಾದವನ್ನು ಮಂಡಿಸುತ್ತಿದ್ದೆ. ಡಾ. ತಿಪ್ಪೇಸ್ವಾಮಿಯವರು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೊರಟಾಗ ಮಧ್ಯೆ ಬಾಯಿ ಹಾಕಿ ತಡೆದು ನಿಲ್ಲಿಸಿದಿರಿ.

ಅಧ್ಯಕ್ಷರು.—ನಿಮ್ಮದನ್ನು ನೀವು ವಾಪಸ್ಸು ನಿಮ್ಮ ಅಭಿಪ್ರಾಯ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—This is British Policy, 'Divide and Rule' ಆಯಿತು. ಹೀಗೆ ಮಾಡಿಕೊಂಡು ಬರಬೇಕೆಂದರೆ ಕಂಟಿನ್ಯೂ ಮಾಡಿ. ನಾವು—ತಿಪ್ಪೇಸ್ವಾಮಿಯವರು ಬೇರೆ ಮಾತನಾಡಿಕೊಳ್ಳುತ್ತೇವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನೀವು ಅವರು ಅನ್ಯೋನ್ಯವಾಗಿರಬೇಕೆಂದು ನನ್ನ ಆಸೆ ನಾವೇನು ಬ್ರಿಟಿಷರು ಅಲ್ಲ. ನಿಮಗೆ ನೇರವಾಗಿ ಹೇಳುತ್ತೇನೆ. ನಿಮಗಿಂತಲೂ ಅಪಾರವಾದ ಕಳಕಳಿ ಹರಿಜನ ಗಿರಿಜನರ ಬಗ್ಗೆ ನಮಗೆ ಇದೆ. ಅವರ ಹೆಸರಿನಲ್ಲಿ ಅಧಿಕಾರ ಬಯಸುವವರು ನೀವು. ನೀವೇನು ನಮಗೆ ಹೇಳಿಕೊಡುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಇದು ಅತಿಯಾಯಿತು. ಅವರ ಹೆಸರಿನ ಮೇಲೆ ಅಧಿಕಾರ ಮಾಡಿದೆ ನಮ್ಮ ಕರ್ತವ್ಯವನ್ನು ನಾವು ನಿರ್ವಹಿಸಲೇಬೇಕು. ಅದನ್ನು ನಾವು ಮಾಡಿದ್ದೇವೆ.

SRI H. T. KRISHNAPPA.—What are you talking? You have not done your duty.

SRI M. MALLIKARJUNA KHARGE.—I don't want to take a certificate from you or from your people You mind it. This is the fourth time that I am elected with complete majority. Don't take it lightly. I don't want any caste Hindus certificate for my performance.

ಶ್ರೀ ಎಂ. ಎಸ್. ಪಾಟೀಲ್.—ವೇರವಾಗಿ ವಿಷಯಕ್ಕೆ ಬರಲಿ ಎಂದು ಮಾನ್ಯ ಕೃಷ್ಣಪ್ಪನವರಲ್ಲಿ ವಿನಂತಿ ಮಾಡುತ್ತೇನೆ. ಖರ್ಗೆಯವರ ಹೆಸರು ತೆಗೆದುಕೊಳ್ಳದೆ ವಿಷಯದ ಮೇಲೆ ಮಾತನಾಡಿ. ತಾವು ಬಹಳ ಹಿರಿಯ ಸದಸ್ಯರು. ವಿಷಯಕ್ಕೆ ಬನ್ನಿ.

ಅಧ್ಯಕ್ಷರು.—ವಿಷಯವನ್ನು ಬೆಂಬಲಿಸಿ, ಇಲ್ಲವೇ ವಿರೋಧಿಸಿ ಮಾತನಾಡಿ.

ಶ್ರೀ ಕೆ. ಮಲ್ಲಪ್ಪ.—ದಾವಣಗೆರೆಯಲ್ಲಿ ವೇದಿಕೆ ಮೇಲೆ ಸಚಿವರ ಮಂತ್ರಿ ಅಧ್ಯಕ್ಷರ ಜೊತೆಯಲ್ಲಿ ನೇರವಾಗಿ ವಾಗ್ವಾದ ನಡೆಯಿತು. ನನ್ನ ಮಾತಿಗೂ ಅವರ ಮಾತಿಗೂ ವ್ಯತ್ಯಾಸವಾಯಿತು. ಅವರನ್ನು ನಾನು ಪ್ರತಿಭಟಿಸಿದ್ದೇನೆಂದು ಡಾ. ತಿಪ್ಪೇಸ್ವಾಮಿಯವರು ಸ್ಪಷ್ಟಪಡಿಸಿದ್ದಾರೆ. ಅದು ಖರ್ಗೆಯವರಿಗೆ ಅರ್ಥವಾಗಿರಬಹುದು. ಅಧಿಕಾರದಲ್ಲಿರುವವರು ಮತ್ತು ಮಂತ್ರಿಗಳು ಈ ಶಬ್ದಕ್ಕೆ ವಿರೋಧಿಸಿದ್ದಾರೆಂದು ಸ್ಪಷ್ಟಪಡಿಸಿದ್ದಾರೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನಾನು ಜಗಳ ಆಡುವುದಕ್ಕೆ ಬಂದಿಲ್ಲ.

ಅಧ್ಯಕ್ಷರು.—ಅವರನ್ನು ಏತಕ್ಕೆ ಹೆದರಿಸುತ್ತಿದ್ದೀರಿ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಕುಳಿತವರು ಎದ್ದು ನಿಂತರೆ ನಾನು ಏನು ಮಾಡಲಿ ?

ಅಧ್ಯಕ್ಷರು.—ನೀವು ಏತಕ್ಕೆ ರೇಗಿಸುತ್ತಿದ್ದೀರಿ ?

AN HON. MEMBER.—After a long time there is an interesting debate in the House.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಯಾವುದೇ ಜಾತಿಯ ಜನರನ್ನು ಶೋಷಣೆ ಮಾಡತಕ್ಕ ಜನ ಯಾರು ಎಂದು ಪತ್ತೆ ಮಾಡುವುದಕ್ಕೆ ಹೊರಟರೆ ಮೊದಲು ಅದೇ ಜನಾಂಗದ ಮುಖಂಡರು ಎಂದು ನಮಗೆ ಸ್ಪಷ್ಟವಾಗಿ ಅಲ್ಲಿ ಇಲ್ಲಿ ಕಂಡು ಬರುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಡಾ. ಅಂಬೇಡ್ಕರ್‌ರವರು ಆ ಜನಾಂಗದ ಶೋಷಕರು ಎಂದು ನಿರ್ಧಾರ ಮಾಡಿದ್ದಾರೆಯೇ ಕೇಳಿ. ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅವರ ಬಗ್ಗೆ ಏತಕ್ಕೆ ಹೇಳುತ್ತೀರಿ. ಈಗಿನ ಸಮಾಜದ ಬಗ್ಗೆ ನಾನು ಹೇಳುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ನಿಮ್ಮ ಒಂದೇ ದೃಷ್ಟಿಯಿಂದ ಈ ಭಾವನೆಯನ್ನು ವ್ಯಕ್ತಪಡಿಸುವುದು ತಪ್ಪು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಮ್ಮ ಉದ್ದೇಶ ಏನಿದೆಯೋ ಅದನ್ನು ಸಾಕಷ್ಟು ಯೋಚಿಸಿದ್ದೀರೋ ಇಲ್ಲವೋ ಏತಕ್ಕೆ ನೀವು ಹಳೆ ತಪ್ಪುತ್ತಿದ್ದೀರಿ. ನಾಯಕರು ಶೋಷಣೆ ಮಾಡುತ್ತಿದ್ದಾರೆಂದರೆ ಹೇಗೆ ? ಯಾವುದೇ ಜನಾಂಗ ಮುಂದೆ ಬರಬೇಕಾದರೆ ಕೆಲವು ನಾಯಕರು ಬೇಕಾಗುತ್ತಾರೆ.

ನಾಯಕರು ಇಲ್ಲದೆ ಬರುವುದಿಲ್ಲ. ಅಂಥವರ ಮೇಲೆ ನೀವು ಆಪಾದನೆ ಮಾಡಿದರೆ ಹೇಗೆ ? ದಯವಿಟ್ಟು ಹಾಗೆ ಜನರಲೈಸ್ ಮಾಡಬೇಡಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇದಕ್ಕೋಸ್ಕರ ನಿಮಗೆ ಅನುಕೂಲವಾಗಿರತಕ್ಕ ವಿಚಾರವನ್ನು ಎತ್ತಿಕೊಂಡು ಅಷ್ಟಕ್ಕೆ ಮಾತ್ರ ಚರ್ಚೆ ಮಾಡಲಿಕ್ಕೆ ಹೋಗುತ್ತಿದ್ದೇನೆ. ನಿಮ್ಮ ಟೀಕೆ ಅಥವಾ ವಿಶ್ಲೇಷಣೆ ವಿಸ್ತೃತವಾಗಿ ನಡೆಯಬೇಕು. ನಾನು ಹೇಳುವುದೇನೆಂದರೆ, ಈ ಜನಾಂಗಗಳು ಈ ದೇಶದಲ್ಲಿ ಸೃಷ್ಟಿಯಾದುದು ಈಗೇನು ಅಲ್ಲ. ಯಾವುದೋ ಕಾಲದಲ್ಲಿ ಜಾತಿಗಳು ಹುಟ್ಟಿದವು. ನಾನು ಈ ಜಾತಿಯಲ್ಲಿ ಹುಟ್ಟಬೇಕಾದರೆ ಕೇಳಿಕೊಂಡು ಬಂದಿರಲಿಲ್ಲ. ಅದೇ ರೀತಿ ಬೇರೆಯವರೂ ಕೂಡ. ಜಾತಿಗಳಿಂದ ಉದ್ಭವವಾಗಿರತಕ್ಕ ಈ ಒಂದು ಕ್ಲಿಷ್ಟ ಪರಿಸ್ಥಿತಿಯನ್ನು ನಿವಾರಿಸಲು ನಾವು ಏನು ಮಾಡುತ್ತಿದ್ದೇವೆ? ಆಯಾಯ ಸಮಾಜವನ್ನೇ, ಜನಾಂಗವನ್ನೇ, ತಿಂದು ಬದುಕತಕ್ಕರಾಕ್ಷಸರು ಆಗುತ್ತಿದ್ದೇವೆ. ಆ ಪ್ರವೃತ್ತಿ ದಿನೇ ದಿನೇ ಬೆಳೆಯುತ್ತಿದೆ. ಅದನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಸ್ನೇಹಿತರು ಅರ್ಥ ಮಾಡಿಕೊಳ್ಳಬೇಕೆಂದು ಹೇಳಿದೆ, ಅವರು ಅರ್ಥ ಮಾಡಿಕೊಳ್ಳದಿದ್ದರೆ ಅವರ ದಡ್ಡತನಕ್ಕೆ ವಿಷಾದಿಸಬೇಕಾಗುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ರೀತಿ ಹೇಳಿದರೆ ಹೇಗೆ ?

ಶ್ರೀ ಎಂ. ಎಸ್. ಪಾಟೀಲ್.—ಅದೇ ರೀತಿ ನಮ್ಮ ಕಡೆಯವರ ಉತ್ತರವನ್ನು ಕೇಳಬೇಕಾಗುತ್ತದೆ ನಮ್ಮಲ್ಲಿ ಏನು ದಡ್ಡತನವಿದೆ ? ಇಷ್ಟು ವಿಪರ್ಯಾಸವಾಗಿ ಮಾತನಾಡುವುದರಲ್ಲಿ ಅರ್ಥವಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇಷ್ಟು ಹೊತ್ತು ಮಾತನಾಡಿದರೂ ನೀವು ವಿಷಯಕ್ಕೇ ಬರಲಿಲ್ಲ,

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಡಾ. ತಿಪ್ಪೇಸ್ವಾಮಿಯವರು ಆದಾಯದ ಮಿತಿ ಯಾವ ಒಂದು ಕುಟುಂಬಕ್ಕೆ ಎಷ್ಟಿರಬೇಕೆಂದು ಮಾಡಿದ್ದಾರೆ. ಅದಂ ಎಲ್ಲಾ ಜನಾಂಗಕ್ಕೂ ಅನ್ವಯಿಸತಕ್ಕ ಹಾಗೆ ಮಾಡಬೇಕೆಂದು ನನ್ನ ಆಗ್ರಹ ಪೂರ್ವಕವಾದ ಮನವಿ ನಾನು ಈ ನಿರ್ಣಯವನ್ನು ಸರಿದು ಮಾತನಾಡುತ್ತಿದ್ದೇನೆಂದು ಪೂರ್ವ ಭಾವಿಯಾಗಿಯೇ ಹೇಳಿದ್ದೇನೆ, ಆದ್ದರಿಂದ ಯಾರು ಈ ಸಮಾಜದಲ್ಲಿ ಕೆಳ ವರ್ಗದಲ್ಲಿದ್ದಾರೆ ಅವರನ್ನು ಮೇಲಕ್ಕೆ ಎತ್ತತಕ್ಕ ವ್ಯಾಮಾಣಿಕ ಪ್ರಯತ್ನ ಮಾಡಬೇಕಾದರೆ ಈ ಒಂದು ನಿರ್ಣಯದ ಹಿಂದೆ ಇರತಕ್ಕ ತತ್ವವನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ ಯಾವ ಒಂದು ಜನಾಂಗವನ್ನು ತೆಗಳತಕ್ಕ ವಿಚಾರವನ್ನು ನಾನು ಹೇಳಲಿಲ್ಲ.

ಶ್ರೀಮಾನ್ ಖಿರ್ಗೆಯವರ ವಿಚಾರ.....

ಅಧ್ಯಕ್ಷರು.—ಅವರ ವಿಚಾರ ಬಿಟ್ಟು ಮಾತನಾಡಿರಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಆ ಮಾತನಾಡಿದಾಗ ನೋವಾಗುತ್ತದೆ. because he cannot be the champion of any particular community. I equally share, more than him. Why should he arrogate him self that right of privilege ? He has no business to do it..... .....

ಅಧ್ಯಕ್ಷರು.—ನೀವು ಎದುರಿಗೆ ಕುಳಿತ್ತಿದ್ದೀರಿ, ಅದಕ್ಕೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇಷ್ಟೆಲ್ಲಾ ಗೊಂದಲವಾದ ಮೇಲೆ ನಾನು ಮಾತನಾಡುವುದಿಲ್ಲ. ನಿಮಗೆ ನಮ್ಮಸ್ಕರಿಸಿ ಇಲ್ಲಿಗೆ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೇ, ಇದು ಖಾಸಗಿ ಸದಸ್ಯರ ನಿರ್ಣಯ ಬಹಳ ದಿನಗಟ್ಟಲೇ, ಬಹಳ ತಿಂಗಳುಗಟ್ಟಲೇ ಚರ್ಚೆ ಮಾಡತಕ್ಕಂಥ ವಿಷಯ. ಆದರೆ ಈ ಸದನಕ್ಕೆ ಅಷ್ಟು ಸಮಯ ಇಲ್ಲ, ಮಾನ್ಯ ಸದಸ್ಯರ ನಿರ್ಣಯ ಮೇಲುನೋಟಕ್ಕೆ, ತರ್ಕಬದ್ಧವಾಗಿ ಕಂಡರೂ ಅದರ ಹಿಂದೆ ಇರತಕ್ಕಂಥ ವಿಚಾರ ಮತ್ತು ಅದು ಸಮಾಜದಲ್ಲಿ ಇರತಕ್ಕಂಥ ಸ್ಥಿತಿಯನ್ನು, ನಮ್ಮ ವ್ಯವಸ್ಥೆಯನ್ನು ಆಳವಾಗಿ ಅಭ್ಯಾಸ ಮಾಡಿದಾಗ ಇಂಥ ನಿರ್ಣಯ ಅನಾವಶ್ಯಕ ಎಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ, ನಮ್ಮ ಪಕ್ಷ ಬರುತ್ತದೆ. ನಿಸಾರ್ ಅಹಮದ್‌ರವರ ಒಂದು ಕವನ ನೆನಪಿಗೆ ಬಂತು. "ಕುರಿಗಳ್ ಸಾರ್ ನಾವು ಕುರಿಗಳ್" ನಮ್ಮನ್ನು ಕಾಯುವ ಕುರುಬರು ಅದು ಎಲ್ಲರಿಗೂ ಬರಬಹುದು ನಾವು ಕುರುಬರು.

ನಾವು ಕಂರಿಗಳು. ನಮ್ಮ ಕಾಯಂವವರು ಕುರುಬರು. ಅದು ಎಲ್ಲರಿಗೂ ಗೊತ್ತಿದೆ. ಲೀಡರ್‌ಷಿಪ್ ವಿಚಾರದ ಬಗ್ಗೆ ನಮ್ಮ ಡಾಕ್ಟರ್ ವಿಚಾರ ಮಾಡಿ ಹೇಳಿದ್ದಾರೆ. ಅದನ್ನು ನಾನು ಜಾತಿಯ ಆಧಾರದ ಮೇಲೆ ಚರ್ಚೆ ಮಾಡುತ್ತಾ ಹೋದರೆ ಯಾವ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕೋ ಆ ರೀತಿ ಅರ್ಥ ಮಾಡಿಕೊಳ್ಳದೇ ಹೋದರೆ ಯಾವುದೇ ವೈಯಕ್ತಿಕ ವಿಷಯಗಳು ಬರಬಹುದು. ಜನಾಂಗದ ಬಗ್ಗೆ ರೇಸ್ ಬಗ್ಗೆ ಮಾತನಾಡುತ್ತಾ ಬಿಳಿಯರು ಪ್ರಭುದ್ಧತೆಗೆ ಬಂದಾಗ, ಅವರ ಕಾಲ ಬ್ರೌನ್ ಪೀಪಲ್ ಏನು ಇದ್ದಾರೆ ನಮ್ಮ ಪ್ರಭುದ್ಧತೆಯ ಕಾಲ ಸುಮಾರು ೨-೩ ಸಾವಿರ ವರ್ಷ ಕಾಣುತ್ತದೆ. ಅನಂತರ ಬಿಳಿಯರು ಈ ವೈಟ್‌ರೇಸ್ ಅವರು ಏನು ಒಂದು ಸುಮಾರು ೧-೧½ ಸಾವಿರ ವರ್ಷ ಕಾಲ ಅವರ ಪ್ರಭುದ್ಧ ಇನ್ನು ಹಳದಿ ಜನಾಂಗ ಮಂಗೋಲಿಯನ್ ಎಂದು ನಾವು ಏನು ಕರೆಯುತ್ತೇವೆ ಚಂಗಲ್ ಖಾನ್ ಇಲ್ಲಯವರೆಗೂ ಅವರ ಪ್ರಭುದ್ಧತೆ. ನಾನು ಏಕೆ ಇದನ್ನು ಹೇಳುತ್ತೇನೆ ಎಂದರೆ ಜಾತಿ, ಜನಾಂಗ ಪ್ರಭುದ್ಧತೆಗೆ ಬರುವುದು ಮತ್ತು ಕೊನೆಗೆ ಅದು ತಾನೇ ತಾನಾಗಿ ಅದರ ಭಾರಕ್ಕೆ ಬಿದ್ದು ಬಿಡುತ್ತದೆ. ಇವತ್ತು ನಮ್ಮ ದೇಶದಲ್ಲಿ ಧಾರ್ಮಿಕ ಚೌಕಟ್ಟಿನಲ್ಲಿ ಜಾತಿಯ ಪದ್ಧತಿಯ ಚೌಕಟ್ಟಿನಲ್ಲಿ ನೋಡಿದರೆ ಜನ ಪ್ರಭುದ್ಧತೆಗೆ ಒಂದು ಏನು ಏನುವುದನ್ನು ಬಹಳವಾಗಿ ವಿಶ್ಲೇಷಣೆ ಮಾಡಬೇಕಾಗುತ್ತದೆ. ಬರೀ ಪ್ರಭುದ್ಧತೆ ಎಂದರೆ ಆರ್ಥಿಕವಾಗಿ ಅಲ್ಲ, ಅಥವಾ ವ್ಯವಹಾರಿಕವಾಗಿಯೂ ಅಲ್ಲ, ಜನಗಣತಿ ಪ್ರಜಾಸಂಖ್ಯೆ ಅಲ್ಲ, ಒಂದರಲ್ಲಿಯೇ ಅಲ್ಲ, ಇವೆಲ್ಲವನ್ನೂ ಸೇರಿಸಿ ಪ್ರಭುದ್ಧತೆಗೆ ಬರುವುದರ ಬಗ್ಗೆ ಹೇಳುತ್ತಾರೆ. ಭಾರತದ ರಾಜಕಾರಣದಲ್ಲಿ ಈ ಜವಹರಲಾಲ್ ನೆಹರೂ ಅವರು ಪ್ರಧಾನಮಂತ್ರಿಯಾಗಿದ್ದಾಗ ವಿರೋಧಪಕ್ಷಗಳಲ್ಲಿ ನಾಯಕತ್ವವಹಿಸಿದ್ದುದು ಸಿ.ಪಿ.ಐ. ಒಂದೇ ಸ್ವತಂತ್ರ ಪಾರ್ಟಿ ನಾಯಕತ್ವ ಆಗಲೀ, ಜನ ಸಂಘ ನಾಯಕತ್ವ ಆಗಲೀ, ಈ ನಾಯಕತ್ವ ಒಂದೇ ಜನಾಂಗಕ್ಕೆ ಜಾತಿಗೆ ಸೇರಿದವರು. ಬ್ರಾಹ್ಮಣ ಜಾತಿಗೆ ಸೇರಿದವರು. ಯಾರಿದ್ದಾರೆ ? ಇದನ್ನು ಯಾರೋ ಮಾಡಿದ್ದಲ್ಲ. ಹಾಗೆ ಒಂದು ವ್ಯವಸ್ಥೆಗೆ ತಾನಾಗಿಯೇ ಇವಾಲ್ವ್ ಆಗಿದೆ. ಆಗ ಯಾವ ಜಾತಿ ಪ್ರಭುದ್ಧರಾಗಿರುವ ಕಡೆ ಒಬ್ಬೊಬ್ಬರನ್ನು ಕಟ್ಟಿ ವಿರೋಧ ಮಾಡತಕ್ಕ ಕಾಲದಲ್ಲಿ. ಬೇರೆ ಬೇರೆ ಜನಾಂಗಗಳಲ್ಲಿ ಹೋಗತಕ್ಕಂಥ ಇಂಡಿಪೆಂಡೆನ್ಸ್ ದಾರಿ ತೋರಿಸುವುದಿಲ್ಲ. ಅವರು ಆ ಗುಂಪಿಗೆ ಸೇರಿಕೊಂಡು ಬದುಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅದನ್ನು ನಾನು ಭಾರದಲ್ಲಿ ಇವತ್ತು ಯಾವುದೋ ಒಂದು ಪ್ರಭುದ್ಧತೆ ಜಾತಿ ಇರಬಹುದು. ಕೆಲವೊಂದು ಜಾತಿಗಳು, ಕೆಲವೊಂದು ವಿಷಯದಲ್ಲಿ ಮಾನ್ಯತೆಯನ್ನು ಯೋಗ್ಯತೆಯನ್ನು ಪಡೆದಿರಬಹುದು. ಆದ್ದರಿಂದ ನಾನು ಪ್ರತಿಯೊಂದು ಜಾತಿಗೆ ತನ್ನದೆ ಆದಂತ ಲೀಡರ್‌ಷಿಪ್‌ನ್ನು ಆರಿಸಿಕೊಳ್ಳುವುದು ಮತ್ತು ತನ್ನ ಲೀಡರ್‌ಷಿಪ್ ಬೆಳೆಸಿಕೊಳ್ಳುವುದು ಆದರ ಆಡಿಯಲ್ಲಿ ಹೋಗತಕ್ಕದ್ದು ನಮ್ಮ ದೇಶದಲ್ಲಿ ನಡೆದುಕೊಂಡು ಬಂದಿದೆ. ಏನಾಕಾರಣ ಪರಿಶಿಷ್ಟ ಜನಾಂಗದವರಿಗೆ ಲೀಡರ್ಸ್ ಶೋಷಣೆ ಮಾಡುತ್ತಾರೆನ್ನುವುದನ್ನು ಕೃಷ್ಣಪ್ಪನವರು ಒಪ್ಪುಲಿಲ್ಲಿ. ಈ ಸಮಯದಲ್ಲಿ ಪ್ರಭುದ್ಧರಿರಲಿ, ಅಪ್ರಭುದ್ಧರಿರಲಿ, ಅಥವಾ ಅಂಶಿಕವಾಗಿ ಪರಿಣತರಿರಲಿ, ಅಪರಿಣತರು ಇರಲಿ, ನಾವು ಈ ಒಂದು ನಿರ್ಣಯದ ಮೂಲಕ ಪಾಸು ಮಾಡುವುದು ಬೇಡವೇದು ನಾನು ಮತ್ತು ನಮ್ಮ ಪಕ್ಷದ ಅಭಿಪ್ರಾಯ ಈ ಬೆಂಬಲ ಕೊಡಬಾರದೆಂದು ನಾನು ತೀರ್ಮಾನ ಮಾಡುತ್ತೇನೆ.

ಅಧ್ಯಕ್ಷರು.—ಏನು ಹೇಳುತ್ತೀರಿ ಡಾಕ್ಟರೇ ?

ಶ್ರೀ ಜೆ. ಹೆಚ್. ಪಟೇಲ್.—ಈ ನಿರ್ಣಯವನ್ನು ಮಾನ್ಯ ಸದಸ್ಯರು ವಾಪಸ್ಸು ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಂ. ತಿಪ್ಪೇಸ್ವಾಮಿ.—ಅಧ್ಯಕ್ಷರೇ, ಖಾರ್ಗೆಯವರಿಗೆ, ಬಸವಲಿಂಗಪ್ಪನವರಿಗೆ ಜಡ್ಜ್‌ಮೆಂಟ್ ನೀವೇ ಕೊಟ್ಟುಬಿಟ್ಟಿರಲ್ಲ. ಸನ್ಮಾನ್ಯ ಜೆ. ಹೆಚ್. ಪಟೇಲರು ಈ ನಿರ್ಣಯದ ಬಗ್ಗೆ ಏನೂ ಹೇಳಿಲ್ಲ. ಅವರು ಹೇಳುವುದು ಬಹಳ ಸ್ವಾರಸ್ಯಕರವಾಗಿ ಹೇಳುತ್ತಾರೆ. ಇದನ್ನು ಪಾಸು ಮಾಡುವುದರಿಂದ ಇವರಿಗೆ ಆಗತಕ್ಕಂಥ ತೊಂದರೆ ಏನು? ಈ ನಿರ್ಣಯ ಮಾಡಿದರೆ ಜನಾಂಗಕ್ಕೆ ಆಗತಕ್ಕಂಥ ತೊಂದರೆ ಏನು? He is beating the bush. "This House unanimously resolves for recommendation" ರೆಕಮೆಂಡೇಷನ್ ಮಾಡಿದರೆ ಆಗತಕ್ಕಂಥ ತೊಂದರೆಗಳೇನು? ಅದರ ಆಧಾರದ ಮೇಲೆ ಇದನ್ನು ರಿಜೆಕ್ಟ್ ಮಾಡಬಹುದು ಎಂದು ಹೇಳತಕ್ಕಂಥದ್ದು. ಜಾತಿಯಂನ್ನು ಹಿಡಿದು ಎಲ್ಲರೂ ಶೋಷಣೆ ಮಾಡುತ್ತಾರೆ. They are valcanoes of the peseantry. ಏಕೆಂದರೆ ಅವರು ಲೋಹಿಯಿಸ್ಟ್. ಈ ಸೆಂಚುರಿಯಲ್ಲಿರತಕ್ಕಂಥ ಪ್ರಮುಖವಾಗಿ

ಸಾಮಾಜಿಕವಾಗಿ ಈ ಕಷ್ಟಪಾಡುಗಳನ್ನು ಗೆದ್ದಿರತಕ್ಕಂಥ ಮಹಾನುಭಾವರಲ್ಲಿ ಈ ಮೂರು ಜನ. ಅವರುಗಳು ಲೋಹಿಯಾ, ರಾಮಸ್ವಾಮಿ ನಾಯ್ಕರ್, ಡಾ॥ ಅಂಬೇಡ್ಕರ್, ಅವರು ಅವರ ಬಗ್ಗೆ ಏನು ಹೇಳುತ್ತಾರೆ ಎಂದರೆ ಷೆಡ್ಯೂಲ್ಡ್ ಕ್ಯಾಸ್ಟ್‌ನ ಬಗ್ಗೆ ನಾನು ಹೇಳುವುದಿಲ್ಲ. ದೇವರು ನನಗೆ ಅನ್ನ ಕೊಟ್ಟಿದ್ದಾನೆ, ಆದರೆ ನನ್ನ ತಮ್ಮನ ಮಗನಿಗೆ ಅನ್ನ ಕೊಡುತ್ತೀರಾ ಎಂದು ಕೇಳಿದರೆ ಏನು ತಪ್ಪಿದೆ?

ಶ್ರೀ ಜೆ. ಹೆಚ್. ಪಟೇಲ್.—ಇದನ್ನು ವಿತ್‌ಡ್ರಾ ಮಾಡಿ. ಆಮೇಲೆ ವಿಚಾರ ಮಾಡೋಣ.

ಶ್ರೀ ಬಿ. ಎಂ. ತಿಪ್ಪೇಸ್ವಾಮಿ.—ಆ ಪ್ರಶ್ನೆ ಅಲ್ಲ, ನನಗೆ ಸಮಾಧಾನವಾಗುವ ಹಾಗೆ ಹೇಳಿದರೆ ವಿತ್‌ಡ್ರಾ ಮಾಡಿಕೊಳ್ಳಬಹುದು.

ಶ್ರೀ ಜೆ. ಹೆಚ್. ಪಟೇಲ್.—ಡಾಕ್ಟರ್ ತಿಪ್ಪೇಸ್ವಾಮಿಯವರ ವಿಚಾರಗಳನ್ನು ಬಹಳ ವರ್ಷಗಳಿಂದ ಕೇಳಿದ್ದೇನೆ. ಒಂದೇ ಸಬ್ಜೆಕ್ಟ್ ಮೇಲೆ ದಿನಗಟ್ಟಲೇ ಚರ್ಚೆ ಮಾಡಿದ್ದೇನೆ. ಈಗ ವಿಧಾನಸಭೆಯಲ್ಲಿ ಪಾಸಾಗಿ ಸದಸ್ಯರ ನಿರ್ಣಯದ ರೂಪದಲ್ಲಿ ಏನು ಚರ್ಚೆಯಾಗುತ್ತದೆ. ಅದನ್ನು ಇಲ್ಲಿ ಪಾಸು ಮಾಡತಕ್ಕಂಥ ರೆಸಲ್ಯೂಷನ್ ಅಲ್ಲ. ಇಷ್ಟೇ ಹೇಳಿದ್ದುದು. ಅದರ ಬಗ್ಗೆ ವ್ಯಾಖ್ಯಾನ ಮಾಡಲಿಕ್ಕೆ ಹೋಗುವುದಿಲ್ಲ. ಇಲ್ಲಿ ಪಾಸು ಮಾಡತಕ್ಕ ರೆಸಲ್ಯೂಷನ್ ಇದು ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಇದನ್ನು ವಿತ್‌ಡ್ರಾ ಮಾಡಿಕೊಳ್ಳಿ.

ಅಧ್ಯಕ್ಷರು.—ಡಾಕ್ಟರೇ ವಿಚಾರ ಮಾಡಿರಿ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ಈ ಕಡೆಯವರು, ಆ ಕಡೆಯವರು. ಹಿರಿಯರು ಹೇಳಲಿ, ಆಮೇಲೆ ವಿತ್‌ಡ್ರಾ ಮಾಡಿಕೊಳ್ಳುತ್ತಾರೆ ಎಂದು ಅವರು ಹೇಳುತ್ತಾರೆ.

ಅಧ್ಯಕ್ಷರು.—ಮಾನ್ಯ ಪಟೇಲರೆ, ಇನ್ನೊಮ್ಮೆ ಹೇಳಿರಿ.

೧-೩೦ ಪಿ. ಎಂ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಈ ನಿರ್ಣಯವನ್ನು ತಂದಿರುವುದು, ಅದನ್ನು ಒತ್ತಾಯ ಮಾಡಬೇಕೆಂದು ಅವರು ತಂದಿಲ್ಲ ಎಂದು ನನ್ನ ಭಾವನೆ. ಏನಾದರೂ ಒಂದು ಚರ್ಚೆ ಮಾಡಿದರೆ ಈ ಜನಗಳ ಮನಸ್ಸಿನಲ್ಲಿ ಲವಲವಿಕೆ ಬರಬಹುದು. ವಿಚಾರಶಕ್ತಿ ಕೂಡ ಜಾಸ್ತಿಯಾಗಿ ಬಹುದು. ಒಬ್ಬೊಬ್ಬರ ಅಭಿಪ್ರಾಯಗಳನ್ನು ಕ್ರೋಢೀಕರಿಸಿಕೊಂಡು ಈ ಹಿಂದುಳಿದ ಜನ ಇದರಿಂದ ಅವರಿಗೆ ಅನುಕೂಲ ಆಗಬಹುದು ಎಂದು ಅವರು ಆ ಉದ್ದೇಶದಿಂದ ತಂದಿದ್ದಾರೆ. ಮಹತ್ವವಾಗಿರತಕ್ಕ ಸಮಸ್ಯೆ ಇದು. ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ವಿದ್ಯಾಭ್ಯಾಸದ ದೃಷ್ಟಿಕೋನಗಳಿಂದ ನೋಡಿದರೂ, ಇಷ್ಟು ಕ್ಷೇತ್ರಗಳಲ್ಲಿ ಹಿಂದುಳಿದಿರತಕ್ಕ ಈ ಜನಾಂಗಕ್ಕೆ ನಿರ್ಣಯದಿಂದ ಸಮಸ್ಯೆ ಬಗೆಹರಿಸುತ್ತೇವೆ ಎಂದು ಹೇಳತಕ್ಕದ್ದು ಆಗುವುದಿಲ್ಲ ನಾನೂ ಮಂತ್ರಿಯಾಗಿದ್ದೆ. ಹಿಂದೆ ಹಲವಾರು ಮಂತ್ರಿಮಂಡಲಗಳು ಬಂದಿವೆ. ಈಗ ಜನತಾ ಪಕ್ಷದ ಮಂತ್ರಿಮಂಡಲ ಬಂದಿದೆ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅವರು ಪ್ರಯತ್ನ ಮಾಡಬೇಕು. ಈ ವಿಷಯವನ್ನು ಜನತಾ ಪಾರ್ಟಿ ಮೀಟಿಂಗ್‌ನಲ್ಲಿ ತಂದು ಜನತಾ ಪಕ್ಷದವರು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಿರಿ ಅಧಿಕಾರಕ್ಕೆ ಬಂದಾಗ ಆ ಕಾರ್ಯಕ್ರಮಗಳನ್ನು ಸರಿಯಾಗಿ ಅನುಷ್ಠಾನಕ್ಕೆ ತಂದಿಲ್ಲ ಎಂದು ಸದಸ್ಯರು ಶ್ರಮವಹಿಸಿ ಚರ್ಚೆ ಮಾಡಿ ಅವರ ಮನಸ್ಸನ್ನು ಬದಲಾವಣೆ ಮಾಡಿ ಏನೇನು ಮಾಡಿಲ್ಲವೋ ಅದನ್ನು ಮಾಡಬೇಕೆಂದು ತೀರ್ಮಾನ ಮಾಡಿದರೆ ಒಳ್ಳೆಯದೆಂದು ಅನ್ನಿಸುತ್ತದೆ ಪಾಸಾಗಿ ಸದಸ್ಯರ ನಿರ್ಣಯವನ್ನು ಒಪ್ಪಿರುವುದು ನನಗೆ ಜ್ಞಾಪಕವೇ ಇಲ್ಲ, ಜೆ.ಎಚ್. ಪಟೇಲರು ಚೆನ್ನಾಗಿ ಹೇಳಿದ್ದಾರೆ. ಅದಕ್ಕೆ ನಾನು ಪಟೇಲರ ಪರವಾಗಿ ಮತ್ತು ಸದನದ ಪರವಾಗಿ ಕೇಳಿಕೊಳ್ಳುತ್ತೇನೆ ತಾವು ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಿ.

ಅಧ್ಯಕ್ಷರು.—ಮಾನ್ಯ ತಿಪ್ಪೇಸ್ವಾಮಿಯವರೇ ಅನುಮತಿ ಕೊಡಿ.

ಶ್ರೀ ಬಿ. ಎಂ. ತಿಪ್ಪೇಸ್ವಾಮಿ.—ನಾನು ಸಣ್ಣ ಹುಡುಗ ಏನಲ್ಲ, ತೀರಾ ಅನುಭವ ಇಲ್ಲದವನೂ ಅಲ್ಲ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಬಿ. ಎಂ. ತಿಪ್ಪೇಸ್ವಾಮಿ.—ಸುಮ್ಮನೇ ಕುಳಿತುಕೊಳ್ಳಬೇಕೋ ? ವಿತ್‌ಡ್ರಾ ಮಾಡಿಕೊಳ್ಳಬೇಕೋ,

ಶ್ರೀ ಜೆ. ಎಚ್. ಪಟೇಲ್.—ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ ನಾನು ಒಂದು ಕಾರಣ ಹೇಳುತ್ತೇನೆ. ಈ ಸಬ್ಜೆಕ್ಟ್ ಓಟ್ ಡೌನ್ ಮಾಡಿದರೆ ಚೆನ್ನಾಗಿ ಕಾಣುವುದಿಲ್ಲ. ಇದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ, ಒಳ್ಳೆಯ ವಿಷಯ. ಆದರೆ ಪಾಸ್ ಮಾಡುವ ರೆಸಲ್ಯೂಷನ್ ಅಲ್ಲ. ಆದ್ದರಿಂದ ದಯವಿಟ್ಟು ವಿತ್‌ಡ್ರಾ ಮಾಡಿ.

ಶ್ರೀ ಬಿ. ಜಿ. ಕೊಟ್ರಪ್ಪ —ಆವಶ್ಯಕವಾದ ತೀರ್ಮಾನದ ಬಗ್ಗೆ ಖಾಸಗಿ ಸದಸ್ಯರಿಂದ ನಿರ್ಣಯ ಬಂದರೆ ಅಷ್ಟು ಎಫಿಕ್ಟೀವಾಗಿ ಇರುವುದಿಲ್ಲ. ಸರ್ಕಾರದಿಂದ ಬಂದರೆ ಒಳ್ಳೆಯದಾಗುತ್ತದೆ.

ಶ್ರೀ ಬಿ. ಎಂ, ತಿಪ್ಪೇಸ್ವಾಮಿ.—ನಿಮ್ಮೆಲ್ಲರ ಅಭಿಪ್ರಾಯ ಆದಾಗುವುದಾದರೆ ನಾನೂ ಒತ್ತಾಯ ಮಾಡುವುದಿಲ್ಲ.

ಅಧ್ಯಕ್ಷರು. —''ಪ್ರಸ್ತಾಪವನ್ನು ಹಿಂತೆದುಕೊಳ್ಳುವುದಕ್ಕೆ ಸಭೆಯ ಅನುಮತಿ ಇದೆಯೇ?''

ಹಿಂತೆಗೆದುಕೊಳ್ಳಲು ಸಭೆಯು ಅನುಮತಿ ನೀಡಿತು.

ನಿರ್ಣಯವನ್ನು ಹಿಂತೆಗೆದುಕೊಳ್ಳಲಾಯಿತು.

೨) ಮದ್ಯಪಾನ ನೀತಿ ಸಂಧಾರಣೆ ಮಾಡಲು ಉನ್ನತಾಧಿಕಾರ ಸಮಿತಿ ನೇಮಕ ಮಾಡುವ ಬಗ್ಗೆ

†ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ಈ ಕೆಳಗಿನ ನಿರ್ಣಯವನ್ನು ಸಭೆಯಂ ಮುಂದೆ ಮಂಡಿಸುವುದಕ್ಕೆ ತಮ್ಮ ಅಪ್ಪಣೆ ಬೇಡುತ್ತೇನೆ.

> ''ಮದ್ಯಪಾನಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಪ್ರಸ್ತುತ ನೀತಿ ಹಾಗೂ ವ್ಯವಸ್ಥೆ ಶ್ರೀ ಸಾಮಾನ್ಯನ ಹಾಗೂ ಬಡಜನರ ಹಿತಕ್ಕೆ ಮಾರಕವಾಗಿ ಪರಿಣಮಿಸಿರುವುದರಿಂದ ಈಗಾಗಲೇ ನಡೆದಿರುವ ದುರಂತಗಳು, ಅವುಗಳ ಬಗ್ಗೆ ನೇಮಿಸಲ್ಪಟ್ಟ ವಿಚಾರಣಾ ಆಯೋಗಗಳ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಇರುವ ನೀತಿ ಹಾಗೂ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಪಾನನಿರೋಧವೂ ಸೇರಿದಂತೆ ಬದಲಿ ನೀತಿ ಹಾಗೂ ವ್ಯವಸ್ಥೆಯಂ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ವಿಧಾನಮಂಡಲದ ಪ್ರತಿನಿಧಿಗಳನ್ನು ಒಳಗೊಂಡ ಒಂದು ಉನ್ನತಾಧಿಕಾರ ಸಮಿತಿಯನ್ನು ನೇಮಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.''

ಸನ್ಮಾನ್ಯ ಅಧ್ಯಕ್ಷರೆ, ನಾನು ಹಲವಾರು ದಿವಸಗಳಿಂದ ಇಂಥ ಒಂದು ಗಂಭೀರ ವಿಷಯವನ್ನು ಈ ಸದನದ ಮುಂದೆ ತಂದು ಪಕ್ಷ ಪಂಗಡಗಳ ಭಿನ್ನಭೇದವಿಲ್ಲದೆ ಆ ಆಯಾಮಗಳನ್ನು ತರದೆ ಚಿಂತನೆ ಮಾಡ ಬೇಕೆಂದು ಆಸೆಪಟ್ಟಿದ್ದೆ. ನಿಜ, ಇವತ್ತಿನ ಸಂದರ್ಭ ಅದಕ್ಕೆ ಅಷ್ಟು ಸರಿಯಾಗಿಲ್ಲ. ಏಕೆಂದರೆ ನಾನೇನಾದರೂ ಕೆಲವು ಮಾತುಗಳನ್ನು ಆಡಿದರೆ ಅದು ಇತ್ತೀಚಿನ ಕೆಲವು ಘಟನೆಗಳು ನಿರ್ಮಾಣ ಮಾಡಿದ ವಾತಾವರಣದಿಂದ ಅದಕ್ಕೆ ಜೋಡಣೆಯಾಗಿ ಬಂತು ಎಂದು ವಿಕೃತಕ್ಕೆ ಒಳಗಾಗುವ ಅಪಾಯ ಇದೆ. ನಾನು ಬಹಳ ಕಳಕಳಿಯಿಂದ ಎಲ್ಲಾ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ. ಇತ್ತೀಚೆಗೆ ನಡೆದಿರುವ ಘಟನೆಗೂ ಈ ನಿರ್ಣಯಕ್ಕೂ ಏನೂ ಸಂಬಂಧ ಇಲ್ಲದೇ ಇರುವುದರಿಂದ ಅದರ ಛಾಯೆಯ ಅಡಿಯಲ್ಲಿ ಈ ನಿರ್ಣಯವನ್ನು ನೋಡಬಾರದು. ನಾನೂ ಕೂಡ ತ ಯಾವ ಆಯಾಮಗಳೂ ಬರದೇ ಇರುವಂತೆ ನೋಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಉದ್ದೇಶಶುದ್ಧಿಯಿಂದ ಇದನ್ನು ನೋಡುವುದಕ್ಕೆ ಪ್ರಯತ್ನ ಮಾಡಬೇಕು. ಒಂದು ವಿಚಾರ ಒಪ್ಪುತ್ತೇನೆ, ಮದ್ಯಪಾನ ವ್ಯವಸ್ಥೆ ಏನಿದೆ ಯಾರೇ ಹೇಳಲಿ ಒಂದು ರಾಜ್ಯ ಸರ್ಕಾರ ತನಗಿಷ್ಟ ಬಂದಂತೆ ಮಾಡಿ ಯಶಸ್ವಿಯಾಗುವ ವ್ಯವಸ್ಥೆ ಅಲ್ಲ. ಇದನ್ನು

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲಾ ಎಂದು ಸೂಚಿಸುತ್ತದೆ.